ಡಾ. ಹಾ. ಮಾ. ನಾಯಕ

ಡಾ. ಮಂಜುನಾಥ ಬೇವಿನಕಟ್ಟಿ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೨೧

ಡಾ. ಹಾ. ಮಾ. ನಾಯಕ

ಡಾ. ಮಂಜುನಾಥ ಬೇವಿನಕಟ್ಟಿ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

Dr. Ha.Ma. Nayak: By Dr. Manjunatha Bevinakatti, Published b
Dr. Karigowda Beechanahalli, Director, Prasaranga, Kannad
University, Hampi, Vidyaranya, Kamalapura 583 221, PP: VIII + ೪
Rs. 12/-

First Impression: 1996

ನಮ್ಮವರು ಪುಸ್ತಕಮಾಲೆ - ೧೬

ಮುಖಪುಟ ವಿನ್ಯಾಸ: ಕೆ. ಮಕಾಳಿ

ಪ್ರಕಾಶಕರು
ಡಾ. ಕರೀಗೌಡ ಬೀಚನಹಳ್ಳಿ
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ-೫೮೩ ೨೨೧

ಬೆಲೆ: ಹನ್ನೆರಡು ರೂಪಾಯಿಗಳು

ಛಾಯಾಕ್ಷರ ಜೋಡಣೆ: ವರ್ಷಿಣಿ ಗ್ರಾಫಿಕ್ಸ್, ಬೆಂಗಳೂರು - ೪೦

ಮುದ್ರಕರು
ಸ್ನೇಹಾ ಪ್ರಿಂಟರ್ಸ್
೨೨, ೨ನೇ ಮೈನ್, ಅತ್ತಿಗುಪ್ಪೆ
ವಿಜಯನಗರ ೨ನೇ ಹಂತ
ಬೆಂಗಳೂರು - ೫೬೦ ೦೪೦

ನಿವೊ್ಮದನೆ

ಹಂಪಿಯ ಕನ್ನಡ ವಿಶ್ವವಿದ್ಯಾಲಯ ವಿದ್ಯೆಯನ್ನು ಕಲಿಯಲು ಅನುವು ಮಾಡಿಕೊಡುವ ಒಂದು ಸಂಸ್ಥೆಯೇ ಹೊರತು, ಅದು ವಿದ್ಯೆಯನ್ನು ಕಲಿಸುವ ಸಂಸ್ಥೆಯಲ್ಲ. ಒಂದು ದೃಷ್ಟಿಯಿಂದ ಇದು ವಿದ್ಯೆಯನ್ನು ನಿರ್ಮಿಸುವ ಸಂಸ್ಥೆಯಾಗಿದೆ. ನಮ್ಮ ದೇಶದಲ್ಲಿ ಹಳೆಯ ಕಾಲದ ತಿಳುವಳಿಕೆಯೊಂದಿದೆ, ಅಲ್ಲದೇ ಪಶ್ಚಿಮದಿಂದ ಹರಿದು ಬರುತ್ತಿರುವ ಜ್ಞಾನಪ್ರವಾಹವೂ ಇದೆ. ಈ ಎರಡೂ ತಿಳುವಳಿಕೆಗಳು ಒಂದಕ್ಕೊಂದು ಸಂಧಿಸಿ, ಬೆಳಕನ್ನು ಉಂಟು ಮಾಡಿವೆ, ಜೊತೆಗೆ ದಿಗ್ಭ್ರಮೆಯನ್ನೂ ತಂದಿವೆ. ಈ ತಿಳುವಳಿಕೆಗಳ ವಿವೇಕದ ವಿನಿಯೋಗ ಇಂದು ಅಗತ್ಯವಾಗಿದೆ. ಇಂಥ ವಿನಿಯೋಗಕ್ಕಾಗಿ ಹೊಸಬಗೆಯ ಶಾಸ್ತ್ರ ವಿಧಾನಗಳು ನಮಗಿಂದು ಬೇಕಾಗಿವೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಸಂಶೋಧನೆಯ ಗುರಿಯೆಂದರೆ ಈ ಶಾಸ್ತ್ರವಿಧಾನಗಳ ನಿರ್ಮಾಣ. ಈ ಬಗೆಯ ಶಾಸ್ತ್ರ-ಕಲೆ, ಅಭಿಜಾತ- ಜಾನಪದ, ಮಾರ್ಗ-ದೇಸಿ, ಸ್ವಕೀಯ- ಪರಕೀಯ, ಪೌರ್ವಾತ್ಯ-ಪಾಶ್ಚಾತ್ಯ ಈ ಬಗೆಯ ದ್ವಂದ್ವಗಳ ಸಾಮರಸ್ಯ ಮತ್ತು ಸಂಘರ್ಷಗಳ ಒಡಲಿನಲ್ಲಿ ಹುಟ್ಟಿಬರುವ ತಿಳುವಳಿಕೆಯನ್ನು ಹಿಡಿದುಕೊಂಡು ಕನ್ನಡದಲ್ಲಿ ಅದಕ್ಕೆ ಅಭಿವ್ಯಕ್ತಿಯನ್ನು ಕೊಡಬೇಕಾಗಿದೆ. ಭಾಷೆಯಲ್ಲಿ ಮೂಡಿ ಬರುವ ತಿಳುವಳಿಕೆ ಮಾತ್ರ ಉಪಯುಕ್ತವಾಗಬಲ್ಲದು. ಅನುವಾದ, ಭಾಷಾಂತರ, ವಿವರಣೆ, ಟೀಕೆ, ವಿಮರ್ಶೆ ಇಂಥ ವಿಧಾನಗಳನ್ನು ಅನುಸರಿಸುತ್ತ ತಿಳುವಳಿಕೆಯ ಹೊಸ ಸಾಹಿತ್ಯ ನಿರ್ಮಾಣವಾಗಬೇಕು. ಅಂಥ ಎಲ್ಲ ಬಗೆಯ ಸಂಶೋಧನಕ್ಕೂ ಕನ್ನಡ ವಿಶ್ವವಿದ್ಯಾಲಯದಲ್ಲಿ ಅನುಕೂಲವಿದೆ, ಅವಕಾಶವೂ ಇದೆ.

ಹೀಗೆ ಮೂಡಿ ಬಂದ ಸಾಹಿತ್ಯ ಪ್ರಕಟವಾಗಬೇಕು. ನಮ್ಮ ವಿಶ್ವವಿದ್ಯಾಲಯದ ಪ್ರಸಾರಾಂಗಕ್ಕೆ ಇಂಥ ಗುರುತರವಾದ ಜವಾಬ್ದಾರಿಯಿದೆ. ವಿದ್ಯೆಯ ಸೃಷ್ಟಿಯಾಗುವುದು ಈ ಪ್ರಸಾರಾಂಗದಲ್ಲಿ. ನಾಡಿನ ತಜ್ಞರಿಂದ ಗ್ರಂಥಗಳನ್ನು ಬರೆಯಿಸಿ ಪ್ರಕಟಿಸುವುದರ ಜೊತೆಗೆ, ವಿಶ್ವವಿದ್ಯಾಲಯ ಸೃಷ್ಟಿಸುತ್ತಿರುವ ಸಾಹಿತ್ಯವನ್ನೂ ಅದು ಪ್ರಕಟಿಸಬೇಕು. ಇದು ತಿಳುವಳಿಕೆಗೆ ಪರಿಪ್ರೇಕ್ಷ್ಯವನ್ನು ಕಟ್ಟುವ ಕೆಲಸ. ನಾಡಿನ ಪ್ರಕೃತಿಯಂತೆ ನಾಡಿನ ಸಂಸ್ಕೃತಿ ಕೂಡ ಈ ಪರಿಪ್ರೇಕ್ಷ್ಯವಿಲ್ಲದೆ ತನ್ನ ಅರ್ಥವನ್ನು ಕಳೆದುಕೊಳ್ಳುತ್ತಿದೆ. ಕಲ್ಲಿನಲ್ಲಿರುವ ಶಾಸನಗಳನ್ನು ಕಣ್ಣೆತ್ತಿ ನೋಡದ ಜನ ಅದೇ ಪುಸ್ತಕದಲ್ಲಿ ಪ್ರಕಟಗೊಂಡರೆ ಓದುತ್ತಾರೆ, ಅರ್ಥ ಮಾಡಿಕೊಳ್ಳುತ್ತಾರೆ. ಜನರಾಡುವ ಶಬ್ದಗಳನ್ನೇ ಕೋಶದಲ್ಲಿ ಸಂಗ್ರಹಿಸಿದರೆ ಆ ಶಬ್ದಗಳಿಗೆ ತಿಳುವಳಿಕೆಯ ಬೆಲೆ ಬರುತ್ತದೆ.

ನಮ್ಮ ಪ್ರಸಾರಾಂಗ, ಈಗಾಗಲೇ ಮಹತ್ವದ ಪುಸ್ತಕಗಳನ್ನು ಪ್ರಕಟಿಸಿದೆ. ಪ್ರಸಾರಾಂಗ, ತನ್ನ ಪ್ರಕಟಣೆಗಳ ಮೂಲಕ ಸಾರ್ಥಕವಾಗಬೇಕಾದ ದಾರಿಯನ್ನು ಹುಡುಕಿಕೊಳ್ಳುತ್ತಿದೆ. ಲೋಕದಲ್ಲಿಯ ತಿಳುವಳಿಕೆಯನ್ನು ಸಂಗ್ರಹಿಸಿ ತಿರುಗಿ ಲೋಕಕ್ಕೇ ದಾನ ಮಾಡುವ ಪ್ರಕ್ರಿಯೆ ಪ್ರಸಾರಾಂಗದಲ್ಲಿ ನಡೆಯುತ್ತಿದೆ. ಸಂಗ್ರಹವಾದ ತಿಳುವಳಿಕೆಗೆ ಗ್ರಂಥಗಳ ರೂಪವನ್ನು ಕೊಡುವ ಹೊಣೆಗಾರಿಕೆ ಪ್ರಸಾರಾಂಗದ್ದಾಗಿದೆ. ಈ ರೂಪಾಂತರದ ಪ್ರಕ್ರಿಯೆ ನಮ್ಮ ವಿಶ್ವವಿದ್ಯಾಲಯದ ವೈಶಿಷ್ಟ್ಯವಾಗಿದೆ.

ನಾವು ನಮ್ಮ ನಮ್ಮಲ್ಲಿ ವಿಚಾರ ವಿನಿಮಯ ನಡೆಯಲು, ಒಬ್ಬರ ಅರಿವನ್ನು ಎಲ್ಲರೂ ಹಂಚಿಕೊಳ್ಳಲು, ವಿಶ್ವವಿದ್ಯಾಲಯದಲ್ಲಿ ಪ್ರತಿವಾರ ಮಂಟಪವೆಂಬ ಕಾರ್ಯಕ್ರಮ ನಡೆಸುತ್ತೇವೆ. ಅಲ್ಲಿ ಹೊಮ್ಮಿದ ವಿಚಾರಗಳು ನಮ್ಮ ಅರಿವನ್ನು ಹೆಚ್ಚಿಸಿದಂತೆ ನಿಮಗೂ ಲಾಭದಾಯಕವಾಗುವವೆಂಬ ನಂಬಿಕೆಯಿಂದ ಕಿರುಪುಸ್ತಿಕೆಗಳ ರೂಪದಲ್ಲಿ ನಿಮ್ಮ ಕೈಗಿಡುತ್ತಿದ್ದೇವೆ.

ಚಂದ್ರಶೇಖರ ಕಂಬಾರ
ಕುಲಪತಿಗಳು

ಪರಿವಿಡಿ

ಡಾ. ಹಾ. ಮಾ. ನಾಯಕ

ಡಾ. ಹಾ.ಮಾ.ನಾಯಕ

೧.೧ ಪರಿಚಯ

ಕನ್ನಡ ಪತ್ರಿಕೆಗಳ ಅಂಕಣ ಬರಹಗಳಿಗೆ ಡಿ.ವಿ.ಜಿ. ಮತ್ತು ತಿ.ತಾ.ಶರ್ಮರ ಕಾಲದಿಂವಲೂ ಪರಂಪರೆಯಿದೆ. ಆ ಅಂಕಣ ಪರಂಪರೆಗೆ ತಮ್ಮ ನಿರಂತರವಾದ ಕೃಷಿಯಿಂದ ಗೌರವ ತಂದುಕೊಟ್ಟವರಲ್ಲಿ ಡಾ. ಹಾ.ಮಾ.ನಾಯಕರು ಮುಖ್ಯರು. ಅವರ ಅಂಕಣ ಸಾಹಿತ್ಯದ ಸಂಕಲನವಾದ 'ಸಂಪ್ರತಿ' ಗೆ ಕೇಂದ್ರ ಸಾಹಿತ್ಯ ಅಕಾಡೆಮಿಯು (೧೯೮೮ರ ಪ್ರಶಸ್ತಿ) ೧೯೮೯ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿತು. ಹೀಗೆ ಮೊಟ್ಟ ಮೊದಲಿಗೆ ಅಂಕಣ ಸಾಹಿತ್ಯಕ್ಕೆ ಪ್ರಶಸ್ತಿ ಪಡೆದು ಆ ಪ್ರಕಾರಕ್ಕೆ ರಾಷ್ಟ್ರಮಟ್ಟದ ಗೌರವ ತಂದುಕೊಟ್ಟವರು ಡಾ.ಹಾ.ಮಾ ನಾಯಕರು. ಇವರ ಪೂರ್ತಿ ಹೆಸರು ಹಾರೋಗದ್ದೆ ಮಾನಪ್ಪ ನಾಯಕ. ಹಾ.ಮಾ.ನಾ. ಎಂಬ ಸಂಕ್ಷಿಪ್ತ ನಾಮದಿಂದ ಅವರು ನಾಡಿನಾದ್ಯಂತ ಜನಪ್ರಿಯರಾಗಿದ್ದಾರೆ.

ಕರ್ನಾಟಕದ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿಗೆ ಸೇರಿದ ಹಾರೋಗದ್ದೆಯು ನಾಯಕರ ಒಂದೇ ಮನೆಯ ಹಳ್ಳಿ. ಹುಟ್ಟಿದ್ದು ೧೯೩೧ರ ಸೆಪ್ಟೆಂಬರ್ ೧೨ (ಸರಕಾರಿ ದಾಖಲೆಗಳ ಪ್ರಕಾರ ಫೆಬ್ರವರಿ ೫). ತಾಯಿತಂದೆಯಿತ್ತ ಹೆಸರು ಮಾನಪ್ಪ. ತಾಯಿ ರುಕ್ಮಿಣಿಯಮ್ಮ, ತಂದೆ ಶ್ರೀನಿವಾಸ ನಾಯಕ. ಹಾ.ಮಾ.ನಾಯಕರ ಪ್ರಾಥಮಿಕ ಓದು ಆಗುಂಬೆಯ ಹತ್ತಿರದ ನಾಲೂರಿನಲ್ಲಿ, ಮಾಧ್ಯಮಿಕ ವಿದ್ಯಾಭ್ಯಾಸ ಮೇಗರವಳ್ಳಿ, ಪ್ರೌಢಶಾಲೆ ಮುಗಿಸಿದ್ದು ತೀರ್ಥಹಳ್ಳಿಯಲ್ಲಿ. ಶಿವಮೊಗ್ಗದಲ್ಲಿ ಇಂಟರ್‌ಮೀಡಿಯೇಟ್ ಮುಗಿಸಿ, ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿ.ಎ. (ಆನರ್ಸ್) ಮುಗಿಸಿದರು. ನಂತರ ಕನ್ನಡ ಅಧ್ಯಾಪಕರಾಗಿ ತುಮಕೂರಿನ ಪ್ರಥಮ ದರ್ಜೆ ಕಾಲೇಜು (೧೯೫೫-೧೯೫೭), ಶಿವಮೊಗ್ಗದ ಸಹ್ಯಾದ್ರಿ ಕಾಲೇಜು (೧೯೫೮-೧೯೬೦) ಗಳಲ್ಲಿದ್ದು, ೧೯೬೧ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸೇರಿದರು. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಸಂಗ ವೇತನ ಪಡೆದು ಕಲ್ಕತ್ತೆಯಲ್ಲಿ ಭಾಷಾ ವಿಜ್ಞಾನ ವಿಭಾಗದಲ್ಲಿ ಖ್ಯಾತ ಭಾಷಾ ವಿಜ್ಞಾನಿಗಳ ಮಾರ್ಗದರ್ಶನದಲ್ಲಿ ಸ್ನಾತಕೋತ್ತರ ಶಿಕ್ಷಣವನ್ನು

ಚಿನ್ನದ ಪದಕದೊಂದಿಗೆ ಗಳಿಸಿದರು. ಅಲ್ಲಿಂದ ಮುಂದೆ ಅವರು ಫುಲ್‌ಬ್ರೈಟ್ ವಿದ್ಯಾರ್ಥಿ ವೇತನ ಪಡೆದು ಅಮೇರಿಕೆಯ ಇಂಡಿಯಾನಾ ವಿಶ್ವವಿದ್ಯಾನಿಲಯದಲ್ಲಿ 'ಕನ್ನಡ: ಸಾಹಿತ್ಯಿಕ ಮತ್ತು ಆಡುಭಾಷೆ' ಎಂಬ ಮಹಾಪ್ರಬಂಧವನ್ನು ಸಿದ್ಧಪಡಿಸಿ, ೧೯೬೨ರಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದರು. ಡಾ.ಹಾ.ಮಾ.ನಾಯಕರು ಅಮೇರಿಕಾದಿಂದ ಹಿಂತಿರುಗಿದ ಮೇಲೆ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅಧ್ಯಾಪಕರಾಗಿ, ಉಪಪ್ರಾಧ್ಯಾಪಕರಾಗಿ, ಅನಂತರ ಪ್ರಾಧ್ಯಾಪಕರಾಗಿ ಕೆಲಸ ನಿರ್ವಹಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ಅವರು ದೀರ್ಘಾವಧಿಯ ಸೇವೆ ಸಲ್ಲಿಸಿದರು (೧೯೬೯-೧೯೮೫). ತಮ್ಮ ಶಿಸ್ತು, ದಕ್ಷತೆಯಿಂದ ಅಧ್ಯಯನ ಸಂಸ್ಥೆಯ ಘನತೆ ಗೌರವಗಳನ್ನು ಎತ್ತರಿಸಿದರು. ಇಂದಿನ ಸಾಮಾಜಿಕ, ಸಾಂಸ್ಕೃತಿಕ ಸಂದರ್ಭಗಳಲ್ಲಿ ವ್ಯವಸ್ಥೆ, ಆಡಳಿತಗಳು ಹೇರುವ ಒತ್ತಡ ಅಡೆತಡೆಗಳ ನಡುವೆಯೂ ಶೈಕ್ಷಣಿಕ ಪರಿಸರದಲ್ಲಿ ಮುನ್ನೋಟವಿರುವ ಒಬ್ಬ ಸಮರ್ಥ ಆಡಳಿತಗಾರ ಹೇಗಿರಬಹುದು ಎಂಬುದಕ್ಕೆ ಮಾದರಿಯಾಗಿದ್ದರು. ಅವರ ನಿರಂತರ ಶ್ರದ್ಧೆಯ ಸೇವೆಗೆ ಸಂದ ಪುರಸ್ಕಾರವೆಂಬಂತೆ ೧೯೮೫ರಲ್ಲಿ ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ನೇಮಕಗೊಂಡರು. ೧೯೮೭ರಲ್ಲಿ ತಮ್ಮ ಸೇವಾ ಅವಧಿ ಇನ್ನೂ ಎಂಟು ತಿಂಗಳು ಇರುವಾಗಲೇ ಸೈದ್ಧಾಂತಿಕ ಕಾರಣಗಳಿಗಾಗಿ ಕುಲಪತಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಮತ್ತೆ ಕನ್ನಡ ಅಧ್ಯಯನ ಸಂಸ್ಥೆಗೆ ಪ್ರಾಧ್ಯಾಪಕರಾಗಿ ಬಂದರು.

ಹಾ.ಮಾ.ನಾಯಕರವರ ಒಟ್ಟಾರೆ ಸಾಹಿತ್ಯವನ್ನು ಪರಿಶೀಲಿಸಿದಾಗ ಅವರ ಸೃಜನಶೀಲ ಮತ್ತು ವಿಮರ್ಶಾ ಸಾಹಿತ್ಯಕ್ಕಿಂತಲೂ ಮಿಗಿಲಾಗಿ ಹೆಚ್ಚು ಉಪಯುಕ್ತಕರ-ವಾಗಿರುವುದು ಅವರು ಅನೇಕ ವಿದ್ವಾಂಸರ ಸಹಯೋಗದಲ್ಲಿ ಪ್ರಕಟಿಸಿರುವ ಸಾಮಾನ್ಯ ಹಾಗೂ ವಿಷಯ ವಿಶ್ವಕೋಶಗಳೆಂದರೆ ತಪ್ಪಾಗುವುದಿಲ್ಲ. 'ಕನ್ನಡ ವಿಶ್ವಕೋಶ', 'ವಿಷಯ ವಿಶ್ವಕೋಶ', 'ಎಪಿಗ್ರಾಫಿಯ ಕರ್ನಾಟಿಕಾ', 'ಕನ್ನಡ ಸಾಹಿತ್ಯ ಚರಿತ್ರೆ', 'Kannada writers and their work' ಮಾಲೆಯ ಸಂಪುಟಗಳು ಅವರ ಸಂಘಟನಾ ಸಾಮರ್ಥ್ಯಕ್ಕೆ ಸಾಕ್ಷಿಯಾಗಿವೆ. ವಿಷಯ ವಿಶ್ವಕೋಶವು ಸಂಶೋಧನೆ ಅಥವಾ ಅಧ್ಯಯನವನ್ನು ಆರಂಭಿಸುವವರಿಗೆ ಉತ್ತಮವಾದ ಸಹಾಯವನ್ನೊದಗಿಸುತ್ತದೆ. ಮೈಸೂರು ವಿಶ್ವವಿದ್ಯಾನಿಲಯ ಕೈಗೆತ್ತಿಕೊಂಡ ಏಳು ಸಂಪುಟಗಳ 'ಗ್ರಂಥಸೂಚಿ' ಇಡೀ ಕನ್ನಡ ಸಾಹಿತ್ಯವನ್ನು ಸಮಗ್ರವಾಗಿ ಹಾಗೂ ಸೂಕ್ಷ್ಮವಾಗಿ ಪರಿಚಯಿಸುವ ಆಕರ ಗ್ರಂಥವಾಗಿದೆ. ಕನ್ನಡದ ಯಾವ ಕ್ಷೇತ್ರದಲ್ಲಿ ಎಷ್ಟರಮಟ್ಟಿಗೆ ಅಧ್ಯಯನ ನಡೆದಿದೆ ಹಾಗೂ ಇನ್ನೆಷ್ಟು ಅಧ್ಯಯನವನ್ನು ನಡೆಸಬೇಕೆಂಬ ಕಲ್ಪನೆ ಬರುವುದು ಈ ಗ್ರಂಥಸೂಚಿಯಿಂದಲೇ ಎಂದರೆ ಅತಿಶಯೋಕ್ತಿಯಲ್ಲ. ಅದೇ ರೀತಿಯಾಗಿ ಸಮರ್ಪಕವಾಗಿ ಪ್ರಕಟವಾಗಿರುವ ಹದಿನಾಲ್ಕು ಸಂಪುಟಗಳ ವಿಶ್ವಕೋಶ (ಕೊನೆಯ ಎರಡು ಸಂಪುಟಗಳು ಇನ್ನೂ ಬಂದಿಲ್ಲ) ಪ್ರತಿಯೊಬ್ಬ ವಿದ್ವಾಂಸರೂ ಪರಾಮರ್ಶಿಸಬೇಕಾದ ಗ್ರಂಥ ಸಮುಚ್ಚಯ. ಈ ಯೋಜನೆಗಳಿಗೆಲ್ಲಾ

ಹಾ.ಮಾ.ನಾಯಕರವರು ವಿಶ್ವವಿದ್ಯಾನಿಲಯ ಅನುದಾನ ಆಯೋಗ (U.G.C) ಮತ್ತು ಕರ್ನಾಟಕ ಸರಕಾರದ ವಿವಿಧ ಇಲಾಖೆಗಳಿಂದ ಅನುದಾನ ದೊರಕುವಂತೆ ಮಾಡಿರುವ ಪ್ರಯತ್ನ ಶ್ಲಾಘನೀಯವಾದುದು.

ಹಾ.ಮಾ.ನಾಯಕರವರ ಸೃಜನಶೀಲ ಹಾಗೂ ಅಧ್ಯಯನಾನುಭವಗಳ ಪ್ರತೀಕವಾಗಿರುವ ಹಲವಾರು ಕೃತಿಗಳ ಮೂಲಕ ಹಾಗೂ ಶ್ರೀಸಾಮಾನ್ಯನ ಬಗೆಗಿನ ಅವರ ಕಾಳಜಿಯ ಕುರುಹಾಗಿರುವ ಅಂಕಣ ಬರೆಹಗಳ ಮೂಲಕ ಪಂಡಿತ ಪಾಮರರೆಲ್ಲರ ಹೃದಯವನ್ನು ಗೆದ್ದಿದ್ದಾರೆ. ಸಂಸ್ಕೃತಿಯ ವಿವೇಚನೆಯು ಅವರ ಅಂಕಣಗಳ ವಿಷಯ. ಅಲ್ಲಿ ಸಂಸ್ಕೃತಿಯ ಮೂಲಭೂತ ವಿಷಯಗಳ ಚರ್ಚೆಗಳಿರುತ್ತವೆ. ಇವಲ್ಲದೆ ಕನ್ನಡಿಗರ ಬದುಕಿನ ಒಳಿತಿಗೆ, ಮೌಲಿಕತೆಗೆ, ಸೃಜನಶೀಲತೆಗೆ, ಅಭಿಮಾನಕ್ಕೆ ಯಾವೆಲ್ಲ ತಿಳುವಳಿಕೆ ಅಗತ್ಯವೆಂದು, ಉಪಯುಕ್ತವೆಂದು ಅವರಂದುಕೊಂಡರೋ ಅವೆಲ್ಲದರ ಬಗ್ಗೆ ಬರೆದಿದ್ದಾರೆ, ಬರೆಯುತ್ತ ಇದ್ದಾರೆ. ಈ ಎಲ್ಲ ಬರಹಗಳ ಹಿಂದೆ ಪ್ರಜ್ಞಾಪೂರ್ವಕವಾದ, ಸುಸಂಸ್ಕೃತ ಮನಸ್ಸೊಂದು ಕಾಳಜಿಪೂರ್ವಕವಾದ ಆಯ್ಕೆ ಮಾಡುವುದನ್ನು, ಜವಾಬ್ದಾರಿಯಿಂದ ನಿರೂಪಣೆ ಮಾಡುವುದನ್ನು ಕಾಣಬಹುದು' (ಡಾ. ಚಂದ್ರಶೇಖರ ಕಂಬಾರ; ಮಾನ: ೧೯೯೨: ೧೧೫). ಹಾ.ಮಾ.ನಾಯಕರು ಯಾವುದೇ ಅಂಕಣ ಬರೆದರೂ ಅವುಗಳು ಜನರನ್ನು ಓದಿಸಿಕೊಂಡು ಹೋಗುವುವಲ್ಲದೆ, ವಿಪುಲವಾದ ಸಾಮಗ್ರಿಯನ್ನೊದಗಿಸುತ್ತವೆ. ಅಲ್ಲದೆ ಅವುಗಳು ಜನರ ಮನಸ್ಸಿಗೆ ತಾಗುವಂತಿರುತ್ತವೆ. ಹಾ.ಮಾ.ನಾಯಕರ ಅಂಕಣ ಸಾಹಿತ್ಯದ ಬಗ್ಗೆ ಪ್ರೊ.ಕು.ಶಿ. ಹರಿದಾಸಭಟ್ಟರು ಹೇಳುವುದೇನೆಂದರೆ, 'ಆಳವಾದ ಅಧ್ಯಯನ ಮತ್ತು ವ್ಯಾಪಕವಾದ ಅನುಭವಗಳ ಸಮ್ಮೇಳನದಿಂದ ಸೃಷ್ಟಿಗೊಳ್ಳುವ ಹಾ.ಮಾ.ನಾಯಕರ ಅಂಕಣಗಳು ತಮ್ಮ ಚಿಂತನಶೀಲತೆಯಿಂದಲೂ, ಶೈಲಿಯ ಸುಭಗತೆಯಿಂದಲೂ, ಸತ್ಯವಾಕ್ಯಗಳಿಂದಲೂ ಸಾಹಿತ್ಯ ಪೀಠದಲ್ಲಿ ಭದ್ರವಾಗಿರುವುದು ಮಾತ್ರವೇ ಅಲ್ಲ, ನಿಡುಗಾಲ ಈ ತೆರನ ಬರಹಗಳಿಗೆ ಆದರ್ಶಪ್ರಾಯವಾಗಿಯೂ ಇರುತ್ತವೆಂದು ನನ್ನ ಅನ್ನಿಸಿಕೆ. ಒಂದು ಘಟನೆಯನ್ನು ವ್ಯಕ್ತಿಯ ಮೂಲಕ ನೆನಪಿಡಬಹುದು; ಅಥವಾ ವ್ಯಕ್ತಿಯೇ ಘಟನೆ ಎನ್ನಿಸಬಹುದು. 'ಸಂಪ್ರತಿ'ಯನ್ನು ಸಮಗ್ರ ದೃಷ್ಟಿಯಿಂದ ನೋಡಿದರೆ ಅದು ಕಳೆದ ದಶಕದ ಒಂದು ಸಾಂಸ್ಕೃತಿಕ ಘಟನೆ ಎಂದೇ ಹೇಳಬೇಕು. ಆ ಘಟನೆಯ ಕೇಂದ್ರಬಿಂದು ಹಾ.ಮಾ.ನಾಯಕರು ಮತ್ತು ಅವರ ವ್ಯಕ್ತಿತ್ವ. ಕರ್ನಾಟಕದ ಸಾಹಿತ್ಯ ಸಂಸ್ಕೃತಿಗಳ ಇತಿಹಾಸವನ್ನೇ ಹಾ.ಮಾ.ನಾಯಕರು ತಮ್ಮ ಅಂಕಣಗಳಲ್ಲಿ ಭಟ್ಟಿ ಇಳಿಸಿದ್ದಾರೆ. ಪತ್ರಕರ್ತನಿಗಿರಬೇಕಾದ ವಸ್ತು ನಿಷ್ಠತೆಯೊಡನೆ ಸೃಜನಶೀಲ ಸಾಹಿತ್ಯಕಾರನ ಬಿನ್ನಾಣ, ಸೌಂದರ್ಯಗಳು ಮೇಳೈಸಿದ ಒಂದು ದ್ರಾಕ್ಷಾಪಾಕ; ಗಟ್ಟಿಯಾದ ಆಲೋಚನಾ ವಿಧಾನ, ವೈಚಾರಿಕ ನಿಲುಮೆಗಳು; ವಸ್ತು, ವಿದ್ಯಮಾನ, ಮತ್ತು ನಿರೂಪಣೆಗಳ ಸುಂದರ ಸಮಾವೇಶ; ಸಾಮಾಜಿಕ ಕಾಳಜಿ; ಸಮಸಮಾಯಿಕತೆಯೊಳಗೂ ಸಾರ್ವಕಾಲಿಕ ಅಂಶಗಳ ಅನ್ವೇಷಣೆ,

ಪರಿಮಾರ್ಜಿಕ ಅಶಿಥಿಲ ಗದ್ಯಶೈಲಿ - ಹೀಗೆ ಸಂಪ್ರತಿ ಸಂಪುಟಗಳಲ್ಲಿ ಹಾ.ಮಾ.ನಾಯಕರ ಅಟ್ಟ ಅಡುಗೆ, ಅದೇ ಅವರು ಕನ್ನಡಕ್ಕೆ ಕೊಟ್ಟ ಕೊಡುಗೆ (ಮಾನ; ೧೯೯೨: ೫೮). ಹಾ.ಮಾ.ನಾಯಕರು ನಮ್ಮ ಸಾಹಿತ್ಯವೆಂಬುದು ಲೋಕಕ್ಕೆ ನಾವು ಕೊಡುವ ಕಾಣಿಕೆ ಎಂಬ ಮನೋಭಾವವುಳ್ಳವರು. ಅಲ್ಲದೆ ಸಾಹಿತ್ಯದಿಂದ ಮುಂದಿನ ಬದುಕು ಒಳ್ಳೆಯದಾಗಬೇಕೆಂಬ ಆಶಯವುಳ್ಳವರು. ಹಾಗಾಗಿ ಅವರು ಸಾಹಿತ್ಯದ ಬಗ್ಗೆ ಹೇಳುವುದೇನೆಂದರೆ: 'ನಾವು ಬದುಕುತ್ತಿರುವ ಜಗತ್ತನ್ನು ನಾಳಿನವರಿಗೆ ಇನ್ನಷ್ಟು ಚೆಲುವಿನದನ್ನಾಗಿ ಬಿಟ್ಟು ಹೋಗೋಣ ಎಂಬುದು ಸಾಹಿತ್ಯದ ಗುರಿಯಾಗಬೇಕು.'

೧. ೨ : ಸಾಹಿತ್ಯ

ಡಾ.ಹಾ.ಮಾ.ನಾಯಕರು ತಮ್ಮ ಮಾಧ್ಯಮಿಕ ಶಾಲೆಯ ದಿನಗಳಿಂದಲೇ ಬರವಣಿಗೆಯಲ್ಲಿ ತೊಡಗಿಸಿಕೊಂಡವರು. ಮೇಗರವಳ್ಳಿ ಮಾಧ್ಯಮಿಕ ಶಾಲೆಯಲ್ಲಿ 'ಮಕ್ಕಳ ಪುಸ್ತಕ' ವೆಂಬ ಪತ್ರಿಕೆಗೆ ಬರೆದಿದ್ದರು. ಪ್ರೌಢ ಶಾಲೆಯಲ್ಲಿ ಅದು ಮತ್ತಷ್ಟು ಗಟ್ಟಿಯಾಗುತ್ತಾ ಮೊನಚಾಗಿತ್ತು. ಕೈ ಬರಹ ಪತ್ರಿಕೆಯ ಖಾಯಂ ಲೇಖಕರಾದರು. ಡಾ.ಹಾ.ಮಾ.ನಾಯಕರು ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಕೃಷಿ ಮಾಡಿದ್ದಾರೆ. ಅವರ ಸಾಹಿತ್ಯಸೃಷ್ಟಿ - ಸೃಜನಶೀಲ, ಸೃಜನೇತರ ಕ್ಷೇತ್ರಗಳೆರಡರಲ್ಲೂ ನಿರಂತರವಾಗಿ ಸಾಗಿದೆ. ಅವರ ಸಾಹಿತ್ಯವನ್ನು ಕಥೆ; ಚಿತ್ರ; ಪ್ರಬಂಧ; ಜೀವನ ಚರಿತ್ರೆ; ಮಕ್ಕಳ ಸಾಹಿತ್ಯ; ವಿಚಾರ ವಿಮರ್ಶೆ; ಅಂಕಣ; ಆಕಾಶವಾಣಿ ಚಿಂತನ; ಅನುವಾದ - ಹೀಗೆ ಹಲವು ಪ್ರಕಾರಗಳಲ್ಲಿ ವಿಂಗಡಿಸಿ ಕೊಳ್ಳಬಹುದಾಗಿದೆ.

೧.೨.೧ : ಕಥೆ, ಚಿತ್ರ, ಪ್ರಬಂಧ:

ಹಾ.ಮಾ.ನಾಯಕರವರು ಕಥೆ, ಚಿತ್ರ, ಪ್ರಬಂಧ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಮೂರು ಕೃತಿಗಳನ್ನು ಹೊರತಂದಿದ್ದಾರೆ. ಅವುಗಳೆಂದರೆ, 'ನಮ್ಮ ಮನೆಯ ದೀಪ' (೧೯೫೬), 'ಬಾಳ್ನೋಟಗಳು' (೧೯೫೦), 'ಹಾವು ಮತ್ತು ಹೆಣ್ಣು'(೧೬೬). ಇವುಗಳಲ್ಲಿ ಮೊದಲನೆಯದು ಲಲಿತ ಪ್ರಬಂಧಗಳ ಸಂಕಲನ, ಎರಡನೆಯದು ಕಿರುಗತೆಗಳ ಸಂಚಯ, ಮೂರನೆಯದು ಸ್ವಂತ ಬರೆದ ಮತ್ತು ಅನುವಾದ ಮಾಡಿದ ಕತೆಗಳ ಸಂಕಲನಗಳಾಗಿವೆ. 'ನಮ್ಮ ಮನೆಯ ದೀಪ' ಸಂಕಲನದಲ್ಲಿರುವ ಏಳೂ ಪ್ರಬಂಧಗಳೂ ಬಿಡಿಬಿಡಿಯಾಗಿ ನಿಂತು ಮುದಕೊಡುತ್ತವೆ. ಒಟ್ಟಿಗೆ ಹೊಂದಿಕೊಂಡಂತೆಯೂ ಹೆಣೆದುಕೊಂಡು ಸಮುದಾಯ ಶೋಭೆಯಿಂದ ಪ್ರಿಯವಾಗುತ್ತವೆ. ರಮಾ ಎಂಬ ಮಗುವಿನ ಬಗೆಗೆ ಬರವಣಿಗೆ ಸುಂದರ ಹಂದರವಾಗಿ ಅನಾವರಣಗೊಳ್ಳುತ್ತದೆ. 'ಬಾಳ್ನೋಟ' ಕೃತಿಯಲ್ಲಿ ಅವರೇ ಹೇಳಿರುವಂತೆ ತಮ್ಮ ಸುತ್ತಮುತ್ತಲಿನ ಜನಜೀವನವನ್ನು ಚಿತ್ರಿಸಲು ಮಾಡಿದ ಪ್ರಯತ್ನ. ಒಂದು ಸಣ್ಣ ಘಟನೆಯನ್ನೋ, ಸನ್ನಿವೇಶವನ್ನೋ, ವ್ಯಕ್ತಿಯ ಗುಣವನ್ನೋ ಲಕ್ಷದಲ್ಲಿಟ್ಟುಕೊಂಡಿವೆ'. ಇದರಲ್ಲಿ ಹದಿನೈದು ಕಿರುಗತೆಗಳಿವೆ. 'ಹಾವು ಮತ್ತು ಹೆಣ್ಣು'

ಹನ್ನೊಂದು ಕಥೆಗಳ ಸಂಗ್ರಹ. ಅವುಗಳು ಸ್ವಂತ ಬರೆದ ಮತ್ತು ಅನುವಾದ ಕಥೆಗಳು. ಕಥೆಗಳಿಗೂ ಭಾಷಾಂತರ ಕಥೆಗಳಿಗೂ ಶೈಲಿಯಲ್ಲಿ ವ್ಯತ್ಯಾಸ ಕಾಣುವುದೇ ಇಲ್ಲ. ಇದು ಇವರ ಭಾಷಾಂತರ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿ. ಇದರಲ್ಲಿಯ ಇವರ ಸ್ವಂತ ಕಥೆಗಳಾದ 'ಬೊಂಬಾಯಿ ಬಳೆ','ಹೆಣ್ಣು ಹೃದಯ' ಮತ್ತು 'ಆಶಾವಾದಿ' ಕಥೆಗಳು ವಸ್ತು, ತಂತ್ರ ಹಾಗೂ ಪರಿಣಾಮಗಳ ದೃಷ್ಟಿಯಿಂದ ಚೆನ್ನಾಗಿ ಮೂಡಿಬಂದಿವೆ.

೧.೨.೨: ಜೀವನ ಚರಿತ್ರೆ :

ಡಾ.ಹಾ.ಮಾ.ನಾಯಕರವರು ಜೀವನ ಚರಿತ್ರೆಯೊಂದನ್ನು ಬರೆದಿದ್ದಾರೆ. ಅದು ಭಾರತದ ಪ್ರಮುಖ ಕವಿಗಳಲ್ಲಿ ಒಬ್ಬರಾದ ರವೀಂದ್ರನಾಥ ಠಾಕೂರರ ಜೀವನ ಚರಿತ್ರೆ. ಅದರ ಹೆಸರು 'ರವೀಂದ್ರನಾಥ ಠಾಕೂರ್' (೧೯೬೦). ಇದು ಕವಿ ರವೀಂದ್ರರ ಜೀವನವನ್ನು ಹೃದಯಂಗಮವಾಗಿ ಪರಿಚಯಿಸುವ ಪುಸ್ತಕ. ಇದು ಜೀವನಚರಿತ್ರೆಯನ್ನು ಹೇಗೆ ಬರೆಯಬೇಕೆಂಬುದರ ಬಗೆಗೆ ಮಾರ್ಗದರ್ಶಿಯಾದ ಕೃತಿಯಾಗಿದೆ. ಇದು ನಾಯಕರ ಶ್ರೇಷ್ಠ ಕೃತಿಗಳಲ್ಲೊಂದು. ಠಾಕೂರರ ಜೀವನವನ್ನು ಹದಿನೈದು ಅಧ್ಯಾಯಗಳಲ್ಲಿ ಪರಿಚಯಿಸುವ ಕೃತಿ. ಅವರ ಸಂಪೂರ್ಣ ಜೀವನದ ಸ್ಪಷ್ಟವಾದ ಚಿತ್ರವನ್ನು ಕೊಡುತ್ತದೆ. ನಾಯಕರು ಠಾಕೂರರ ಜೀವನದ ಹಲವು ಘಟನೆಗಳನ್ನು ರಸವತ್ತಾಗಿ ಚಿತ್ರಿಸಿದ್ದಾರೆ.

೧.೨.೩: ಮಕ್ಕಳ ಸಾಹಿತ್ಯ:

ಡಾ. ಹಾ.ಮಾ.ನಾಯಕರು ಮಕ್ಕಳಿಗೆ ಉಪಯುಕ್ತವಾದ ಮೂರು ಕೃತಿಗಳನ್ನು ರಚಿಸಿದ್ದಾರೆ. ಈ ಕೃತಿಗಳು ಮಕ್ಕಳಿಗೆ ಆಗಿ ಹೋದ ಮಹಾನ್‌ವ್ಯಕ್ತಿಗಳ ಜೀವನ ಚರಿತ್ರೆಗಳನ್ನು ತಿಳಿಸಿಕೊಡುತ್ತವೆ. ಹೊಸದಾಗಿ ಓದು ಕಲಿತ ವಯಸ್ಕರಿಗೂ ಸಹ ಈ ಕೃತಿಗಳು ಉಪಯುಕ್ತಕವಾಗಿವೆ. ಅವುಗಳೆಂದರೆ, 'ಅಕ್ಕಮಹಾದೇವಿ' (೧೯೭೫), 'ಗುರುದೇವ ರವೀಂದ್ರರು' (೧೯೬೧) ಮತ್ತು 'ಮಹಮ್ಮದ್ ಪೈಗಂಬರ್' (೧೯೫೨). ಇವುಗಳು ಕ್ರಮವಾಗಿ ಕರ್ನಾಟಕದ ಹನ್ನೆರಡನೇ ಶತಮಾನದಲ್ಲಿ ಜೀವಿಸಿದ್ದ ಒಬ್ಬ ಶಿವಶರಣೆ, ಭಾರತದ ಒಬ್ಬ ಮಹಾನ್ ಲೇಖಕ ಮತ್ತು ಜಾಗತಿಕ ವ್ಯಾಪ್ತಿಯ ಒಬ್ಬ ಪ್ರವಾದಿಯನ್ನು ಕುರಿತು ಬರೆದಂತಹ ಕೃತಿಗಳಾಗಿವೆ. 'ಅಕ್ಕ ಮಹಾದೇವಿ', ಚೆನ್ನಮಲ್ಲಿಕಾರ್ಜುನನೇ ತನ್ನ ಗಂಡನೆಂದು ತನ್ನನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡ ಶರಣೆ-ಭಕ್ತೆ-ವಚನಕಾರ್ತಿ. ಅಕ್ಕಮಹಾದೇವಿಯ ಉಜ್ವಲವಾದ ಜೀವನವನ್ನು ತಿಳಿಗನ್ನಡದಲ್ಲಿ ಮಕ್ಕಳಿಗೆ ಪರಿಚಯಿಸಿರುವ ಕೃತಿ. 'ಗುರುದೇವ ರವೀಂದ್ರರು' ರವೀಂದ್ರನಾಥ ಠಾಕೂರರ ಜೀವನ ಪರಿಚಯವನ್ನು ಹತ್ತು ಅಧ್ಯಾಯಗಳಲ್ಲಿ ವಿವರಿಸುತ್ತದೆ. ಕೃತಿ ಮಹಮ್ಮದ್ ಪೈಗಂಬರ್ ಅವರು ಏಳನೆಯ ಶತಮಾನದಲ್ಲಿ ಬದುಕಿದ್ದ ಒಬ್ಬ ಪ್ರವಾದಿ. 'ಮಹಮ್ಮದ್ ಪೈಗಂಬರ್' ಪ್ರವಾದಿ ಮಹಮ್ಮದರ ಬದುಕಿನ

ಮಹೋನ್ನತಿಯನ್ನು ಶ್ರೀಸಾಮಾನ್ಯರು, ಮಕ್ಕಳು ಮತ್ತು ನವಸಾಕ್ಷರರಿಗೂ ಎಟುಕುವಂತೆ ಸರಳಗೊಳಿಸಿ ಚೊಕ್ಕವಾಗಿ ನಿರೂಪಿಸಿರುವುದು ಈ ಪುಸ್ತಕದ ಹೆಚ್ಚಳವಾಗಿದೆ.

೧.೨.೪: ವಿಚಾರ, ವಿಮರ್ಶೆ:

ವಿಚಾರಶೀಲ ಸಾಹಿತ್ಯದ ಮೂಲಕವೇ ನಾಡಿನಾದ್ಯಂತ ಪ್ರಸಿದ್ಧಿ ಮತ್ತು ಜನಪ್ರಿಯತೆಯನ್ನು ಪಡೆದ ಡಾ.ಹಾ.ಮಾ.ನಾಯಕರು ಹಲವಾರು ಕೃತಿಗಳನ್ನು ಬರೆದಿದ್ದಾರೆ. ಹಾಗೆಯೇ ವಿಮರ್ಶೆಯನ್ನು ಕುರಿತು ಹಲವಾರು ಕೃತಿಗಳನ್ನು ಹೊರತಂದಿದ್ದಾರೆ. ಡಾ.ಹಾ.ಮಾ.ನಾಯಕರ ವಿಚಾರ, ವಿಮರ್ಶೆ, ಕುರಿತ ಗ್ರಂಥಗಳಲ್ಲೂ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳೂ ಸೇರಿದಂತೆ ಹಲವು ಸಮ್ಮೇಳನಗಳಲ್ಲಿ ಅವರು ಭಾಷಣ ಮಾಡಿದ ಉದ್ಘಾಟನಾ, ಸ್ವಾಗತ, ಪ್ರಧಾನ, ಅಧ್ಯಕ್ಷ ಹಾಗೂ ಸಮಾರೋಪ ಭಾಷಣಗಳೂ; ವಿಚಾರಗೋಷ್ಠಿಗಳಲ್ಲಿ ಮಂಡಿಸಿದ ಪ್ರಬಂಧಗಳು, ಅಭಿನಂದನಾ, ಸನ್ಮಾನ, ಸ್ಮರಣ ಸಂದರ್ಭಗಳಿಗಾಗಿ ಸಿದ್ಧಪಡಿಸಿದ ಬರಹಗಳು; ನಿಯತಕಾಲಿಕೆಗಳ ವಿಶೇಷ ಸಂಚಿಕೆಗಳಿಗಾಗಿ ಬರೆದ ಲೇಖನಗಳು; ಪ್ರಬುದ್ಧ ಕರ್ಣಾಟಕದ ಸಂಪಾದಕೀಯ ಹಾಗೂ ವಸ್ತುಕೋಶದ ಬರಹಗಳು; ವಿಶ್ವಕೋಶ, ಸಾಹಿತ್ಯಚರಿತ್ರೆ ಮೊದಲಾದ ಸಂಪುಟಗಳಿಗೆ ಬರೆದ ಲೇಖನಗಳು; ಪುಸ್ತಕ ಪರಿಚಯ, ವಿಮರ್ಶೆಗಳು; ಅನುವಾದಗಳು; ಬೇರೆಯವರ ಕೃತಿಗೆ ಬರೆದ ಮುನ್ನುಡಿಗಳು- ಮುಂತಾದವು ಸೇರ್ಪಡೆಯಾಗುತ್ತವೆ.

'ಜಾನಪದ ಸ್ವರೂಪ' (೧೯೭೧), 'ಬೆಳ್ಳಿ ಕರ್ನಾಟಕ' (೧೯೮೧), 'ಸಂಕೀರ್ಣ' (೧೯೬೬), 'ಸಂಗ್ರಹ' (೧೯೭೬), 'ಸಂಚಯ' (೧೯೬೯), 'ಸಂದರ್ಭ' (೧೯೭೮), 'ಸಂವಾದ' (೧೯೭೨), 'ಸಪ್ತಕ' (೧೯೮೯), 'ಸಮೀಕ್ಷೆ' (೧೯೬೭), 'ಸಿಂಗಾರ' (೧೯೮೧), 'ಸೃಜನ' (೧೯೮೧), 'ಸ್ತವನ' (೧೯೮೦), 'ಸ್ಮರಣ' (೧೯೮೧), 'ಸಿವುಡು' (೧೯೯೧), 'ಸಂಭ್ರಮ' (೧೯೯೧), 'ಸೊಡರು' (೧೯೯೧), 'ಸಿಂಚನ' (೧೯೯೧), 'ಕನ್ನಡ ಮನಸ್ಸು' (೧೯೯೧) ಮೊದಲಾದ ಕೆಲವು ಕೃತಿಗಳನ್ನು ಇಲ್ಲಿ ಗುರುತಿಸಬಹುದು.

'ಕನ್ನಡವನ್ನು ಕಟ್ಟುವ ಕೆಲಸ' ಕೃತಿಯು ಐವತ್ತೇಳನೆಯ ಮತ್ತು ಐವತ್ತೆಂಟನೆಯ ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳಿಗೆ ಸಂಬಂಧಿಸಿದ್ದು. ಕನ್ನಡವನ್ನು ಕಟ್ಟುವ ಕೆಲಸ, ಸಂಪಾದಕೀಯ ಅಭಿಪ್ರಾಯಗಳು; ಕೆಲವು ಪ್ರತಿಕ್ರಿಯೆಗಳು; ಸಮಾರೋಪ ಸಮಾರಂಭ ಭಾಷಣ; ಅಧ್ಯಕ್ಷಪದ ಒಪ್ಪಿಸಿಕೊಟ್ಟ ಭಾಷಣ ಎಂಬ ಐದು ಅಧ್ಯಾಯಗಳು, ಕೊನೆಯಲ್ಲಿ ಸಮ್ಮೇಳನದ ಹೊತ್ತಿನಲ್ಲಿ ಪ್ರಕಟವಾದ ಲೇಖನಗಳು, ಸಂದರ್ಶನಗಳು ಮತ್ತು ಸಮ್ಮೇಳನ ಸಮೀಕ್ಷೆಗಳ ವಿವರಗಳಿರುವ ಸಂದರ್ಭ ಬರಹಸೂಚಿ ಇದೆ.

'ಜಾನಪದ ಸ್ವರೂಪ' ಕೃತಿ ವೈಜ್ಞಾನಿಕ ಜಾನಪದದ ಮೊದಲ ಕೃತಿ. ಡಾ.ಹಾ.ಮಾ.ನಾಯಕರು ಜಾನಪದದ ವ್ಯವಸ್ಥಿತವಾದ ಹಾಗೂ ವೈಜ್ಞಾನಿಕವಾದ ಅಧ್ಯಯನಕ್ಕೆ ಭದ್ರ ಬುನಾದಿ ಹಾಕಿದ ಕೆಲವೇ ವಿದ್ವಾಂಸರಲ್ಲಿ ಮೊದಲಿಗರು. ೧೯೬೬ರಲ್ಲಿ

ಕನ್ನಡ ಅಧ್ಯಯನ ಸಂಸ್ಥೆ ವ್ಯವಸ್ಥೆಗೊಳಿಸಿದ್ದ 'ಲೇಖಕರ ಸಮ್ಮೇಳನ'ದಲ್ಲಿ 'ಕನ್ನಡ ಜನಪದ ಸಾಹಿತ್ಯ: ವಿವಿಧ ಮುಖಗಳು' ಎಂಬ ಗೋಷ್ಠಿಯಲ್ಲಿ ಹಾ.ಮಾ.ನಾಯಕರು 'ಜಾನಪದ ಸಾಹಿತ್ಯ ಅದರ ಸ್ವರೂಪ' ಎಂಬ ಪ್ರಬಂಧ ಮಂಡಿಸಿದರು. ಈ ಪ್ರಬಂಧದ ಮೂಲಕ ನಾಯಕರು ನಮ್ಮ ಜಾನಪದ ಅಧ್ಯಯನದ ಮೇಲೆ ಹೊಸ ಬೆಳಕು ಚೆಲ್ಲಿದರು. ಜಾನಪದವನ್ನು ಹೇಗೆ ಒಂದು ವಿಜ್ಞಾನವಾಗಿ ಪರಿಗಣಿಸಬೇಕು, ಅದರ ಅಂಗಗಳಾವುವು, ಜನಪದ ಸಾಹಿತ್ಯ ಎಂಬುದು ಹೇಗೆ ಜಾನಪದ ಚಕ್ರದ ಒಂದು ಪುಟ ಮುಂತಾದ ವಿಚಾರಗಳನ್ನು ಚರ್ಚಿಸಿ, ಇಂತಹ ವಿಜ್ಞಾನಕ್ಕೆ ಸರಿಯಾದ ಪಾರಿಭಾಷಿಕ ಶಬ್ದಗಳನ್ನು ಬಳಸುವುದು ಸೂಕ್ತ ಎಂದು ಒತ್ತಿ ಹೇಳಿದರು. 'Folk' ಗೆ 'ಜನಪದ' ಮತ್ತು `Folk-lore' ಗೆ 'ಜಾನಪದ'ಎಂಬ ಶಬ್ದಗಳನ್ನೂ ಸೂಚಿಸಿ ಸಾಕಷ್ಟು ಸಮರ್ಥ ರೀತಿಯಲ್ಲಿ ಈ ಶಬ್ದಗಳ ಬಳಕೆಯ ಬಗ್ಗೆ ಸಮಾಲೋಚಿಸಿದ್ದಾರೆ. ಜನಪದ ಸಾಹಿತ್ಯದ ನಾಲ್ಕು ಪ್ರಮುಖ ಅಂಗಗಳಾದ ಕತೆ, ಗೀತೆ, ಲಾವಣಿ, ಗಾದೆ ಮತ್ತು ಒಗಟುಗಳ ಸ್ವರೂಪ, ಲಕ್ಷಣ ಮತ್ತು ಅವುಗಳ ಬಗ್ಗೆ ನಡೆದ ವೈಜ್ಞಾನಿಕ ಅಧ್ಯಯನಗಳನ್ನು ಸಮೀಕ್ಷಿಸಿದ್ದಾರೆ. ವಾಕ್ ಸಂಪ್ರದಾಯದ ಕಥೆಗಳ ವರ್ಗೀಕರಣದ ಬಗ್ಗೆ ಚರ್ಚಿಸಿ, 'ಆಶಯ' (Motif) ಮತ್ತು 'ವರ್ಗ' (Type) ಪರಿಕಲ್ಪನೆಗಳನ್ನು ವಿವರಿಸಿದ್ದಾರೆ. ಜನಪದ, ಜಾನಪದ ಹಾಗೂ ಜನಪದ ಸಾಹಿತ್ಯಗಳ ಖಚಿತ ಬಳಕೆಯನ್ನು ಖಚಿತವಾಗಿ ಹೇಗೆ ಬಳಸಬೇಕೆಂಬುದನ್ನು ವಿವರಿಸಿದ್ದಾರೆ. ಅವರು ತಮ್ಮ 'ಜಾನಪದ ಅಧ್ಯಯನ ವೈಜ್ಞಾನಿಕ ದೃಷ್ಟಿ' ಎಂಬ ಲೇಖನದಲ್ಲೂ ಆರ್.ಎಸ್. ಬಾಗ್ಸ್‌ರವರು ವಿಸ್ತಾರವಾಗಿ ರೂಪಿಸಿದ್ದ ಜಾನಪದದ ವರ್ಗೀಕರಣವನ್ನು ಪರಿಚಯಿಸಿಕೊಟ್ಟಿದ್ದಾರೆ. 'ಜಾನಪದ ಸ್ವರೂಪ' ಕೃತಿಯಲ್ಲಿ ಮೇಲಿನ ಎರಡು ಲೇಖನಗಳ ಜೊತೆಗೆ ಜಾನಪದಕ್ಕೆ ಡಬ್ಲ್ಯೂ.ಜೆ. ಥಾಂಸನ್‌ನ ಕೊಡುಗೆ ಮತ್ತು ಜನಪದ ಕಲೆಯನ್ನು ಕುರಿತು ಎರಡು ಲೇಖನಗಳೂ ಇವೆ. ಇಲ್ಲಿಯೇ ಹೇಳಬೇಕಾದ ಇನ್ನೊಂದು ವಿಚಾರವೆಂದರೆ, ನಾಯಕರು ಕನ್ನಡ ಜಾನಪದಕ್ಕೆ ನೀಡಿದ ಮತ್ತೊಂದು ಕೊಡುಗೆ, 'ಕನ್ನಡ ಜಾನಪದ ಗ್ರಂಥಸೂಚಿ' (೧೯೭೪). ಇದರಲ್ಲಿ ೧೯೭೩ರವರೆಗೆ ಕನ್ನಡದಲ್ಲಿ ಪ್ರಕಟವಾದ ಜಾನಪದದ ವಿವಿಧ ಶಾಖೆಗಳಿಗೆ ಸಂಬಂಧಪಟ್ಟ ಕೃತಿಗಳನ್ನು ಶೋಧಿಸಿ ಈ ಸೂಚಿಯಲ್ಲಿ ವಿವರಗಳನ್ನು ನೀಡಿದ್ದಾರೆ. ಕಾವ್ಯ-ಲಾವಣಿ, ಕಥೆ- ಐತಿಹ್ಯ, ಕಥೆ-ಭಾಷಾಂತರ-ರೂಪಾಂತರ, ಗಾದೆ-ಒಗಟು, ನಾಟಕ-ರಂಗಭೂಮಿ, ವಿಚಾರ -ವಿಮರ್ಶೆ-ಸಂಶೋಧನೆ, ಸಂಕೀರ್ಣ ಎಂಬ ಏಳು ವರ್ಗಗಳಲ್ಲಿ ಐನೂರು ಗ್ರಂಥಗಳನ್ನು ಟಿಪ್ಪಣಿ ಸಹಿತ ಪ್ರಕಟಿಸಿದ್ದಾರೆ.

'ಬೆಳ್ಳಿ ಕರ್ನಾಟಕ' ಕೃತಿ ಭಾಷಣ ಹಾಗೂ ಸಂದರ್ಶನಗಳ ಸಂಕಲನ. ನಾನು ಕನ್ನಡ ತಾಯಿಯನ್ನು ಕಂಡೆ, ನಾವುಬಯಸಿದ ಕರ್ನಾಟಕ, ಕಾಲು ಶತಮಾನದ ಕರ್ನಾಟಕ, ದೇವರಿಲ್ಲದ ಗುಡಿ, ಸಾಂಸ್ಕೃತಿಕ ಅಪೇಕ್ಷೆ ಹಾಗೆಯೇ ಉಳಿದಿದೆ. ಭಾಷೆ ಸಾಹಿತ್ಯಗಳ ಪ್ರಗತಿ: ಒಂದು ನೋಟ, ಪ್ರಶ್ನೋತ್ತರ, ತಾಯ್ನುಡಿಯಲ್ಲಿ ಶಿಕ್ಷಣ, ಗೋಕಾಕ್ ಸಮಿತಿವರದಿ ಎಂಬ ಲೇಖನಗಳಿವೆ. ನಾಯಕರು ಮೇಲಿನ ಲೇಖನಗಳ ಮೂಲಕ ಕನ್ನಡ ಭಾಷೆ,

ಸಾಹಿತ್ಯ, ಸಂಸ್ಕೃತಿ, ಮಾತೃಭಾಷಾ ಶಿಕ್ಷಣ ಪ್ರಯೋಜನ, ಗೋಕಾಕ್ ವರದಿಯ ಬಗೆಗೆ ವಿಚಾರಗಳನ್ನು ಮಂಡಿಸಿದ್ದಾರೆ. ತಾವು ಬಯಸುವ ಸಂಸ್ಕೃತಿ, ಭಾಷೆ, ಮಾತೃಭಾಷಾ ಶಿಕ್ಷಣ ಮುಂತಾದವುಗಳ ಬಗೆಗೆ ಗಂಭೀರವಾದ ಚರ್ಚೆಗಳನ್ನು ಮಂಡಿಸಿದ್ದಾರೆ. 'ಸಂಕೀರ್ಣ' ಕೃತಿ, ಪತ್ರಿಕೆ, ಅಭಿನಂದನಾ ಕೃತಿಗಳು ಹಾಗೂ ಆಕಾಶವಾಣಿಗಾಗಿ ಬರೆದ ಲೇಖನಗಳನ್ನು ಒಳಗೊಂಡಿದೆ. ಕುವೆಂಪು, ಬೇಂದ್ರೆ, ಮಾಸ್ತಿ, ಮುಗಳಿ, ವಿ.ಸೀ. ಎಂ.ಆರ್.ಶ್ರೀ, ಎ.ಆರ್. ಕೃ., ಡಿ.ಎಲ್.ಎನ್. ಮುಂತಾದ ಕನ್ನಡ ಸಾಹಿತ್ಯದ ದಿಗ್ಗಜಗಳ ವ್ಯಕ್ತಿ ಚಿತ್ರಣಗಳನ್ನು ಚಿತ್ರಿಸಿದ್ದಾರೆ. ವ್ಯಕ್ತಿ ಚಿತ್ರಣಗಳನ್ನು ಕೊಡುವಾಗ ಹಾ.ಮಾ.ನಾಯಕರು ತಮ್ಮದೇ ಆದ ವೈಶಿಷ್ಟ್ಯವನ್ನು ಪ್ರತಿ ಲೇಖನದಲ್ಲೂ ತೋರಿಸಿದ್ದಾರೆ. ಈ ಕೃತಿಯಲ್ಲಿ ಬರೆದ ಚದುರಂಗರ ಜನಪ್ರಿಯ ಕಾದಂಬರಿ ಸರ್ವಮಂಗಳವನ್ನು ಕುರಿತ ವಿಮರ್ಶೆ ಆ ಕೃತಿಯ ಒಳನೋಟವನ್ನು ಕೊಡುತ್ತದೆ. ಅವರ ಇನ್ನೊಂದು ಕೃತಿಯಾದ 'ಸಂಗ್ರಹ' ಬೇರೆ ಬೇರೆ ಸಂದರ್ಭಗಳಿಗೆಂದು ಸಿದ್ಧಗೊಳಿಸಿದ ಬರಹಗಳ ಕಟ್ಟು. ಇದರಲ್ಲಿ ಜಾನಪದ, ವ್ಯಕ್ತಿಚಿತ್ರ, ಕೃತಿಪರಿಶೀಲನೆ, ಭಾಷೆ, ನೆಲ ಜಲ - ಇಂತಹ ವಿಷಯಗಳನ್ನು ಕುರಿತು ಪ್ರಸ್ತಾಪಿಸಲಾಗಿದೆ. ಭಾಷೆ ನೆಲ ಜಲಕ್ಕೆ ಸಂಬಂಧಿಸಿದಂತೆ ತಮ್ಮ ಸ್ಪಷ್ಟವಾದ ಧೋರಣೆಯನ್ನು ಲೇಖನದಲ್ಲಿ ಮಂಡಿಸಿದ್ದಾರೆ. ಕೃತಿ ಪರಿಶೀಲನೆ ಲೇಖನದಲ್ಲಿ, ಒಂದು ಕೃತಿಯನ್ನು ಹೇಗೆ ಪರಿಶೀಲಿಸಬೇಕು, ಅದರಲ್ಲಿರುವ ಆಯಾಮಗಳನ್ನು ಹೇಗೆ ಗುರುತಿಸಬೇಕು, ಅದರ ಪರಿಶೀಲನೆಯನ್ನು ಅದರ ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂದರ್ಭದಲ್ಲಿ ಹೇಗೆ ನೋಡಬೇಕೆಂಬುದನ್ನು ಸ್ಪಷ್ಟವಾಗಿ ವಿವರಿಸಿದ್ದಾರೆ.

'ಸಂಚಯ' ಮಿಶ್ರಜಾತಿಯ ೧೩ ಲೇಖನಗಳನ್ನೊಳಗೊಂಡ ಸಂಕಲನ. ಕನ್ನಡ ಭಾಷೆ, ಸಾಹಿತ್ಯ, ಕಲೆ ಮೊದಲಾದ ವಿಚಾರ ಪ್ರಚೋದಕವಾದ ಸಾಹಿತ್ಯಾಭ್ಯಾಸಿಗಳಿಗೆ ತುಂಬಾ ಉಪಯುಕ್ತವಾದ ಪ್ರಬಂಧಗಳಾಗಿವೆ. ಇವೆಲ್ಲ ವಿವಿಧ ಕನ್ನಡ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ಬರಹಗಳಾಗಿದ್ದು, ಎರಡು ಅನುಬಂಧಗಳನ್ನು ಹೊಸದಾಗಿ ಸೇರಿಸಿದ್ದಾರೆ. ಒಂದು ವರ್ಷದಲ್ಲಿ (೧೯೬೫-೬೬ರಲ್ಲಿ) ಪ್ರಕಟವಾದ ಕಾದಂಬರಿ ಮತ್ತು ಕಥಾಸಂಗ್ರಹಗಳ ಪಟ್ಟಿ ಇಲ್ಲಿ ಸೇರ್ಪಡೆಯಾಗಿರುವ ಹೊಸ ಮಾಹಿತಿಯಾಗಿದೆ. ಶಾಸ್ತ್ರೀಯ, ವೈಜ್ಞಾನಿಕ ಗ್ರಂಥಗಳ ಗದ್ಯ, ಕನ್ನಡ ಸಾಹಿತ್ಯದ ಇತ್ತೀಚಿನ ಪ್ರವೃತ್ತಿಗಳು, ದೇ.ಜ.ಗೌ, ಇಬ್ಬರು ಐರೋಪ್ಯ ಕಲಾವಿದರು, ಸಿಖ್ ಜನಾಂಗದ ದೇವರು, ಧರ್ಮ-ಎಂಬ ಬರಹಗಳು ಇದರಲ್ಲಿವೆ. ಕೃತಿಯಲ್ಲಿ ನಾಯಕರು ತಮ್ಮ ಮನಸ್ಸಿನಲ್ಲಿರುವುದನ್ನು ನೇರವಾಗಿ ಹೇಳುತ್ತಾರೆ. ಸ್ಪಷ್ಟವಾಗಿ ತಿಳಿಸಲೆತ್ನಿಸುತ್ತಾರೆ. ತಮಗೆ ಅನಿಸಿದ್ದನ್ನು ನೇರವಾಗಿ ನಿರೂಪಿಸುವುದಕ್ಕೆ ಒಂದು ಉದಾಹರಣೆ: "ದುರ್ದೈವದ ಮಾತೆಂದರೆ ಸಮಕಾಲೀನ ರಾಜಕೀಯ ಜೀವನದಲ್ಲಿ ಕಂಡುಬರುವ ದುಷ್ಟ ಪ್ರವೃತ್ತಿಗಳು ನಮ್ಮ ಸಾಹಿತ್ಯ ವಿಮರ್ಶೆಯಲ್ಲೂ ತಲೆದೋರಿವೆ. ಲೇಖಕನ ಮಹತ್ವ ಅವನ ಕೃತಿಗಳಿಂದಲ್ಲವೆ ವಿಮರ್ಶಕರ ಅಭಿರುಚಿಗಳಿಂದ ನಿರ್ಣಯವಾಗುತ್ತದೆ. ವ್ಯಕ್ತಿಪೂಜೆ ಜೊತೆಗೆ ಜಾತೀಯತೆ, ಪ್ರಾದೇಶಿಕ ಭಾವನೆಗಳು ಅತ್ಯಂತ ಸವಿರಾದ ರೀತಿಯಲ್ಲಿ ಕಾರ್ಯೋನ್ಮುಖವಾಗಿವೆ.

ಈ ಅನಿಷ್ಟಗಳ ನಡುವಿನಲ್ಲಿಯೂ ಈಚಿನ ಪ್ರವೃತ್ತಿಗಳಲ್ಲಿ ವಿಮರ್ಶಕ ಸಮಕಾಲೀನ ಪ್ರತಿಜ್ಞೆಯನ್ನು ಹೆಚ್ಚಿಸಿಕೊಂಡಿರುವುದು, ವಿಮರ್ಶೆಗಾಗಿಯೇ ನಿಯತಕಾಲಿಕೆಗಳೂ ಹುಟ್ಟಿಕೊಂಡಿರುವುದು, ತನಗೆ ತೋರಿದ್ದನ್ನು ಧೈರ್ಯವಾಗಿ ಹೇಳುವ ಮನೋಭಾವವನ್ನು ಬೆಳೆಸಿಕೊಂಡಿರುವುದು, ಹೆಚ್ಚು ಸಂಖ್ಯೆಯಲ್ಲಿ ಗ್ರಂಥಗಳು ಪ್ರಕಟವಾಗುತ್ತಿರುವುದು- ಉಲ್ಲೇಖನೀಯ ವಿಚಾರಗಳಾಗಿವೆ" (ಪುಟ ೭೯). ಈ ಕೃತಿಯಲ್ಲಿ ವಿಮರ್ಶಕರು ಹೇಗೆ ಜಾತೀಯತೆ, ಪ್ರಾಂತೀಯತೆಗಳನ್ನು ಮಾಡುತ್ತಾರೆ ಎಂಬುದನ್ನು ಹೇಳುತ್ತಾರೆ.

'ಸಂದರ್ಭ' ಕೃತಿಯು ಲೇಖಕರು ವಿವಿಧ ಸಂದರ್ಭಗಳಲ್ಲಿ ಮಾಡಿದ ಭಾಷಣಗಳ ಸಂಕಲನ. ನಾಡು, ನುಡಿ, ಸಾಹಿತ್ಯ, ಲೇಖಕರುಗಳನ್ನು ಕುರಿತಂತೆ ಮಾಡಿದಂತಹ ಭಾಷಣಗಳು ಇಲ್ಲವೆ. 'ಸಂವಾದ' ಕೃತಿ ಸಹ ಸಾಂದರ್ಭಿಕವಾದ ಲೇಖನ, ಅನುವಾದ ಮತ್ತು ಭಾಷಣಗಳ ಸಂಕಲನ. ಸಂಕೀರ್ಣರೂಪದ ಈ ಸಂಕಲನದಲ್ಲಿ ಒಟ್ಟು ಹನ್ನೆರಡು ಬರಹಗಳಿವೆ. ಜಾನಪದ, ವ್ಯಕ್ತಿಚಿತ್ರ, ಕವಿಕಾವ್ಯ ಪರಿಚಯ ಸಂಬಂಧದ ವಿವೇಚನೆಯನ್ನು ಪ್ರಸ್ತುತ ಕೃತಿಯಲ್ಲಿ ಮಾಡಿದ್ದಾರೆ. 'ಸಪ್ತಕ' ಕೃತಿಯು ಕನ್ನಡ ಸಾಹಿತ್ಯ ಚರಿತ್ರೆ ಮತ್ತು ಪೂರಕ ನೆಲೆಯ ಒಟ್ಟು ಏಳು ಪ್ರಕಟಿತ ಲೇಖನಗಳ ಸಂಕಲನ. ಇವುಗಳು ತಮ್ಮ ವಿಷಯದ ಬಗೆಗಿನ ಆಳವಾದ ಮತ್ತು ಖಚಿತವಾದ ಅಧ್ಯಯನಶೀಲತೆಯಿಂದ ಮೂಡಿದ ಲೇಖನಗಳಾಗಿವೆ. ಹಾಗಾಗಿ ಇವು ಸಂಶೋಧನ ಪ್ರವೃತ್ತಿಯ ಪಾಂಡಿತ್ಯಪೂರ್ಣವಾದ ಲೇಖನಗಳಾಗಿವೆ. 'ಸಮೀಕ್ಷೆ' ಕೃತಿ ಹಾ.ಮಾ.ನಾಯಕರ ವಿಮರ್ಶಾ- ಲೇಖನಗಳ ಸಂಕಲನ. ಅವರ ಈ ಕೃತಿಯಲ್ಲಿಯ ಪ್ರತಿಯೊಂದು ಲೇಖನವೂ ಓದುಗನನ್ನು ಸೆರೆಹಿಡಿಯುತ್ತವೆ. ಕೃತಿಯಲ್ಲಿ ಹತ್ತು ವರ್ಷಗಳ ಕನ್ನಡ ವಿಮರ್ಶೆ, ಒಂದು ದಶಕದ ಕನ್ನಡ ಸಾಹಿತ್ಯ, ಈಚಿನ ಕನ್ನಡ ವ್ಯಾಕರಣ ಸಾಹಿತ್ಯ ಎಂಬ ಮೂರು ಲೇಖನಗಳಿವೆ. ಕನ್ನಡದ ವಿಮರ್ಶಾ ಗ್ರಂಥಗಳು, ಕಥೆ, ಕಾದಂಬರಿ, ಕಾವ್ಯ, ನಾಟಕ, ಪ್ರಬಂಧ, ಪ್ರವಾಸ, ಜೀವನ, ಪರಿಚಯ, ವಿಚಾರ, ವಿಮರ್ಶೆ, ವ್ಯಾಕರಣ ಹೀಗೆ ಎಲ್ಲದರ ಬಗೆಗೆ ಸಮಗ್ರ ವಿಶ್ಲೇಷಣೆಯಿಂದ ಕೂಡಿದೆ. ಕೃತಿಯಲ್ಲಿನ ಯಾವುದೇ ಲೇಖನವನ್ನು ಕೈಗೆತ್ತಿಕೊಂಡರೂ, ಲೇಖನದಲ್ಲಿರುವ ನಿಷ್ಪಕ್ಷಪಾತ ದೃಷ್ಟಿ, ನಿರ್ವಿಕಾರ ಮನೋಭಾವ, ನಿರ್ದಾಕ್ಷಿಣ್ಯವಾದ ಅಭಿಪ್ರಾಯಗಳು ನಮ್ಮನ್ನು ವಿಸ್ಮಯಗೊಳಿಸುತ್ತವೆ. 'ಸಿಂಗಾರ' ಹಾ.ಮಾ.ನಾಯಕರು ಬೇರೆ ಬೇರೆಯವರ ಪುಸ್ತಕಗಳಿಗೆ ಬರೆದ ಮುನ್ನುಡಿಗಳಲ್ಲಿ ಆಯ್ದು ಹೆಣೆದ ಹನ್ನೆರಡು ಲೇಖನಗಳ ಗ್ರಂಥ. ಸಿಂಗಾರವೆಂದರೆ ಕಳಶದ ಪೂಜೆಗೆ ಇಡುವ ಅಡಕೆಯ ಹೊಂಬಾಳೆ. ಕಳಶದ ಪೂಜೆಗೆ ಹೊಂಬಾಳೆ ಹೇಗೆಯೋ ಹಾಗೆಯೇ ಈ ಲೇಖನಗಳು ಸಹ ಕೃತಿ ಕಳಶಕ್ಕೆ ಇಡುವ ಮುನ್ನುಡಿಗಳು. ಅಂದರೆ ಕೃತಿಕಳಶಕ್ಕೆ ಇಡುವ ಮುನ್ನುಡಿ ಹೂಗಳನ್ನು ಕಟ್ಟಿಕೊಟ್ಟಿರುವ ಇದರಲ್ಲಿ ಚದುರಂಗ, ಬೆಸಗರಹಳ್ಳಿ ರಾಮಣ್ಣ, ಪಿ.ಆರ್. ತಿಪ್ಪೇಸ್ವಾಮಿ, ಕಿಂ. ರಾಮಕೃಷ್ಣ, ಮೊದಲಾದವರ ಪುಸ್ತಕಗಳಿಗೆ ಬರೆದ ಮುನ್ನುಡಿಗಳು ಸೇರ್ಪಡೆಯಾಗಿದ್ದು, ಸಾಹಿತ್ಯಾಸಕ್ತ ಓದುಗರಿಗೆ ಆಕರ ಮೌಲ್ಯದ್ದಾಗಿದೆ. 'ಸೃಜನ' ಕೃತಿ

ಹಾ.ಮಾ.ನಾಯಕರು ಸಾಹಿತ್ಯ, ಪುಸ್ತಕ, ವಿಮರ್ಶೆ, ಭಾಷೆ, ಸಂವಹನ ಮುಂತಾದ ವಿಷಯಗಳ ಬಗೆಗಿನ ಲೇಖನಗಳನ್ನು ಕ್ರೋಡೀಕರಿಸಿದ್ದಾರೆ. ಸೃಜನ ಕೃತಿಯಲ್ಲಿ ದೀಪಾವಳಿಯ ನೆನಪುಗಳು, ನಾನು ಮತ್ತು ಪುಸ್ತಕಗಳು, ಗಾಂಧಿ ಎಂಬ ಹೆಸರು, ನ್ಯಾಯಾನ್ಯಾಯ ವಿವೇಚನೆ, ಮುತ್ತಿನಹಾರ, ಓದುವ ಕಲೆ, ಭಾಷೆಯಿಂದ ಭಾಷೆಗೆ, ಸಾಹಿತ್ಯ ಮತ್ತು ಸಂವಹನ, ನಮ್ಮ ಆಧುನಿಕ ಸಾಹಿತ್ಯದ ಸಮಸ್ಯೆಗಳು, ಏಕಲಿಪಿ, ದಸರಾ : ಕೆಲವು ಪ್ರಸಂಗಗಳು, ಹೋಗಿ ಬರುತ್ತೇನೆ ಎಂಬ ಹದಿಮೂರು ಪ್ರಬಂಧಗಳಿವೆ. 'ಸ್ತವನ' ವ್ಯಕ್ತಿ ಚಿತ್ರಗಳ ಕೃತಿ. ಸ್ತವನದಲ್ಲಿ ಹದಿನೇಳು ವ್ಯಕ್ತಿ ಚಿತ್ರಗಳಿವೆ. ಇಲ್ಲಿಯ ವ್ಯಕ್ತಿಚಿತ್ರಣಗಳಿಗೆ ಪ್ರತಿಯೊಬ್ಬರ ಗುಣ ವಿಶೇಷಣಗಳೇ ಮುಖ್ಯವಾಗಿವೆ. ಇವುಗಳು ಆತ್ಮೀಯ ನೆನಪುಗಳು ಮಾತ್ರವಲ್ಲದೆ ಅವರ ಗ್ರಂಥ ಮತ್ತು ಸಂಶೋಧನೆಗಳ ಪರಿಚಯವೂ ಸಹ ಆಗುತ್ತವೆ. 'ಸ್ಮರಣ' ಕೃತಿಯಲ್ಲಿಯೂ ಸಹ ಸ್ತವನ ಕೃತಿಯಲ್ಲಿರುವಂತೆ ವ್ಯಕ್ತಿ ಚಿತ್ರಗಳಿವೆ. ಸ್ಮರಣದಲ್ಲಿ ದೇಶ ವಿದೇಶಗಳಲ್ಲಿ ಹೆಸರಾಗಿರುವ ಲೇಖಕ, ತತ್ವಜ್ಞಾನಿ, ವಿಜ್ಞಾನಿ, ವಿದ್ವಾಂಸ, ಮತ್ತು ಕಲಾವಿದರಲ್ಲಿಯ ಕೆಲವರ ವ್ಯಕ್ತಿ ಚಿತ್ರಗಳನ್ನು ಚಿತ್ರಿಸಿದ್ದಾರೆ. ಬೇರೆ ಬೇರೆ ಸಂಘ ಸಂಸ್ಥೆಗಳಿಗೆ ಕೊಡುಗೆ ನೀಡಿದ ಪ್ರೌಢ ಸ್ಮರಣೀಯರ ಬಗೆಗೂ ಸಹ ಬರೆದಿದ್ದಾರೆ. ಈ ರೀತಿಯಲ್ಲಿ ವ್ಯಕ್ತಿಯ ಚಿತ್ರಗಳನ್ನು ಕೊಡುವಾಗ ಹಾ.ಮಾ.ನಾಯಕರು ತಮ್ಮದೇ ಆದ ವಿಶಿಷ್ಟತೆಯನ್ನು ಅನುಸರಿಸುತ್ತಾರೆ. ವೆಂಕಟರಾಯರ ಸ್ಮರಣೆಯನ್ನು ಬರೆಯುವಲ್ಲಿ "ವೆಂಕಟರಾಯರ ಸ್ಮರಣೆ ನಾಡ ಜನರಿಗೆ ಶಕ್ತಿಯನ್ನೂ ಸ್ಫೂರ್ತಿಯನ್ನೂ ಕೊಡುವಂಥದು. ಅವರ ವಿಚಾರಗಳು ಬಹುಶಃ ಅವರ ಕಾಲಕ್ಕಿಂತ ಹೆಚ್ಚಾಗಿ ಈಗ ನಮಗೆ ಅಗತ್ಯವಾಗಿದೆ." ಕಣ್ಮರೆಯಾದ ವ್ಯಕ್ತಿಯ ಬಗ್ಗೆ ಹೇಳುತ್ತಲಿರುವಾಗ ವರ್ತಮಾನಕ್ಕೂ ಸಹ ಪ್ರಸ್ತುತಗೊಳಿಸುವ ಶೈಲಿ ವಿಶಿಷ್ಟವಾದುದು.

'ಸಿವುಡು' ಕೃತಿ ತಮ್ಮ ಅರವತ್ತನೆಯ ವರ್ಷದ ನೆನಪಿಗಾಗಿ 'ಅರವತ್ತರ ಅರಲು' ಮಾಲೆಯಲ್ಲಿ ಪ್ರಕಟವಾದ ಕೃತಿ. ಸಿವುಡು ಎಂದರೆ ಕಟ್ಟು. ವಿವಿಧ ವಿಷಯಗಳನ್ನು ಕುರಿತ ಹದಿನೈದು ಲೇಖನಗಳನ್ನು ಒಟ್ಟಿಗೇ ಸೇರಿಸಿದ್ದಾರೆ. ಜನಪದಕ್ಕೆ ಸಂಬಂಧಿಸಿದ ಎರಡು ಲೇಖನಗಳಲ್ಲಿ ಜಾನಪದ ಈವರೆಗೆ ನಡೆದುಬಂದ ದಾರಿಯ ಒಂದು ವಿಹಂಗಮ ನೋಟವನ್ನು, ಕಥೆ, ಕಾವ್ಯ, ಗಾದೆ, ಒಗಟು, ನಾಟಕ ಪ್ರಕಾರಗಳ ಅವಲೋಕನವನ್ನೂ ಕಾಣಬಹುದು. ಮಾಧ್ಯಮದ ಎರಡು ತುದಿಗಳಾದ ಉತ್ಪಾದನೆ ಮತ್ತು ಗುರಿಗಳ ಸಮಾನ ಪ್ರಾಮುಖ್ಯದ ಪ್ರಸ್ತಾಪದಿಂದ ಹಿಡಿದು ಸಂಗೀತದಲ್ಲಿ ಭಾಷೆಯ ಸ್ಥಾನದವರೆಗೆ ಹಾ.ಮಾ.ನಾಯಕರ ವಿಚಾರ ಲಹರಿ ಹರಿಯುತ್ತದೆ. 'ಸಿವುಡು' ಕೃತಿಯಂತೆಯೇ 'ಸಂಭ್ರಮ', 'ಸೊಡರು', 'ಸಿಂಚನ', 'ಕನ್ನಡ ಮನಸ್ಸು' ಕೃತಿಗಳು ಸಹ ಅವರ 'ಅರುವತ್ತರ ಅರಲು' ಮಾಲೆಯಲ್ಲಿ ಪ್ರಕಟವಾಗಿರುವಂತಹವುಗಳು. 'ಸಂಭ್ರಮ' ಕೃತಿಯು ಡಾ.ಹಾ.ಮಾ.ನಾಯಕರು ಬೇರೆಯವರ ಕೃತಿಗಳಿಗೆ ಬರೆದ ಹದಿನೈದು ಮುನ್ನುಡಿಗಳ ಸಂಗ್ರಹ. ಇಲ್ಲಿನ ಮೂಲ ಕೃತಿಗಳ ಪ್ರಕಾರ ವೈವಿಧ್ಯ ಗಮನಾರ್ಹವಾದುದು. ಪ್ರವಾಸ

ಕಥನ, ಲಲಿತ ಪ್ರಬಂಧ, ಅನುವಾದ, ಸಂಪಾದಿತ, ಪಿಎಚ್.ಡಿ. ಪ್ರಬಂಧ, ವಯಸ್ಕರ ಶಿಕ್ಷಣ, ಸೂಚಿ ಮೊದಲಾದ ವಿವಿಧ ಬಗೆಯ ಕೃತಿಗಳಿಗೆ ಬರೆದ ವಸ್ತುನಿಷ್ಠ ಮುನ್ನುಡಿಗಳಿವೆ. 'ಸೊಡರು' ಕೃತಿಯಲ್ಲಿ ವ್ಯಕ್ತಿ ಚಿತ್ರಗಳಿವೆ. ಪುಸ್ತಕದ ಮೊದಲ ಹದಿನಾಲ್ಕು ಬರಹಗಳು ವಿವಿಧ ಸಂದರ್ಭಗಳಿಗಾಗಿ ಸಿದ್ಧಪಡಿಸಿದ ಭಾಷಣಗಳು ಹಾಗೂ ಸಂಸ್ಮರಣ ಗ್ರಂಥಗಳಿಗಾಗಿ ಬರೆದ ಲೇಖನಗಳು. ಈ ಎಲ್ಲಾ ಲೇಖನಗಳಲ್ಲಿ ಹಾ.ಮಾ.ನಾಯಕರವರು ತಾವು ಹೊಂದಿರುವ ಗೌರವ, ಮೆಚ್ಚುಗೆ ಹಾಗೂ ಭಾವನಾತ್ಮಕ ಸಂಬಂಧಗಳನ್ನು ಆಪ್ತ ಧಾಟಿಯಲ್ಲಿ ಹೇಳುತ್ತಾರೆ. ಹಾಗೆಂದ ಮಾತ್ರಕ್ಕೆ ಆಯಾ ವ್ಯಕ್ತಿಗಳ ಅರೆಕೊರೆಗಳನ್ನು ಹೇಳಿಲ್ಲವೆಂದಲ್ಲ, ಹೇಳಿದ್ದಾರೆ. ಆದರೆ ಅಂತಹ ಸಂದರ್ಭಗಳು ತೀರಾ ವಿರಳ. ಆಗಿನ ದನಿ ಗೌಣ, ಅಭಿನಂದನದಂತಹ ಸಂದರ್ಭ ಮಹತ್ವದಿಂದ ಈ ಧೋರಣೆ ಸಹಜವೇ ಆಗಿದೆ.'ಸಿಂಚನ' ಕೃತಿ ಹದಿನೈದು ಲೇಖನಗಳ ಸಂಕಲನ. ಗಾಂಧೀಜಿಯಿಂದ ಗೋವಿಂದಪೈ ವರೆಗೆ, ಪ್ರಾಕೃತ ಪಥದಿಂದ ಕುರ್‌ಆನಿನವರೆಗೆ ಇಲ್ಲಿಯ ಲೇಖನಗಳು ಹಬ್ಬಿವೆ. ಇಲ್ಲಿಯ 'ಅಂಕಣ ಬರಹ' ಮತ್ತು 'ವ್ಯಕ್ತಿ ಚಿತ್ರಗಳು' ಎಂಬ ಲೇಖನಗಳು, ಅಂಕಣ ಬರಹ ಮತ್ತು ವ್ಯಕ್ತಿಚಿತ್ರಗಳು ನಡೆದು ಬಂದ ಹಾದಿಯನ್ನು ಅಧಿಕೃತ ವಿವರಗಳೊಂದಿಗೆ ತಿಳಿಸುತ್ತವೆ. ಸುಮಾರು ಇಪ್ಪತ್ತೈದು ವರ್ಷಗಳಿಂದಲೂ ತಮ್ಮನ್ನು ತೀವ್ರವಾಗಿ ತೊಡಗಿಸಿಕೊಂಡಿರುವ ಕಲೆ, ಸಾಹಿತ್ಯ, ಶಿಕ್ಷಣ, ಸಂಸ್ಕೃತಿಗಳನ್ನು ಕುರಿತ ತಮ್ಮ ಅಂಕಣ ರಚನೆಯ ರೂಪುರೇಷೆಗಳನ್ನು 'ನನ್ನ ಅಂಕಣ ಸಾಹಿತ್ಯ' ನಿರೂಪಿಸುತ್ತದೆ. 'ನಾನೇಕೆ ಬರೆಯುತ್ತೇನೆ' ಮತ್ತು 'ಜೀವನದಿಂದ ನಾನೇಕೆ ಕಲಿತೆ' ಎಂಬ ಎರಡು ಲೇಖನಗಳು ಹಾ.ಮಾ.ನಾಯಕರ ಆತ್ಮಕಥಾನಕವಾಗಿದ್ದು, ಅವರ ಜೀವನದೃಷ್ಟಿಯನ್ನು ಸ್ಪಷ್ಟವಾಗಿ ಸರಳವಾಗಿ ನಿರೂಪಿಸುತ್ತವೆ.

'ಕನ್ನಡ ಮನಸ್ಸು' ಕೃತಿ ಡಾ.ಹಾ.ಮಾ.ನಾಯಕ ಅವರ ಅಂತರಂಗಕ್ಕೆ ಹಿಡಿದ ಕನ್ನಡಿಯಂತಿದೆ. ಕನ್ನಡ ಭಾಷೆ, ಸಾಹಿತ್ಯಕ್ಕಾಗಿ ಯಾವಾಗಲೂ ಚಿಂತಿಸುತ್ತಿರುವ, ಚಿಂತನೆಯನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ಹೋರಾಡುವ ಕ್ರಿಯಾಶೀಲ ವ್ಯಕ್ತಿತ್ವ ನಿರೂಪಿಸಿದ ದಾಖಲೆಯಾಗಿದೆ. ಇದರಲ್ಲಿ ಗೋಕಾಕ ವರದಿ, ಕನ್ನಡ ಮತ್ತು ಇತರ ಭಾಷೆಗಳ ಸಂಬಂಧ, ಕನ್ನಡ ಚಳುವಳಿ, ಸರಕಾರದ ಹೊಣೆ ಮೊದಲಾದ ಅನೇಕ ವಿಷಯಗಳಿಗೆ ಸಂಬಂಧಪಟ್ಟ ಹದಿನಾರು ಲೇಖನಗಳ ಮೂಲಕ ತೀವ್ರವಾಗಿ ಪ್ರತಿಕ್ರಿಯಿಸಿದ್ದಾರೆ. ಕನ್ನಡದ ಪ್ರಗತಿಯ ಬಗೆಗೆ ಸರ್ಕಾರದ ಧೋರಣೆಯನ್ನು ಕುರಿತು ಕೆಲವೇ ವಾಕ್ಯಗಳಲ್ಲಿ ಅವರು ನಿರೂಪಿಸುತ್ತಾರೆ. "ಪ್ರತಿಯೊಂದು ಚುನಾವಣೆಯ ಹೊತ್ತಿನಲ್ಲಿ ಆಸೆಯ ಮಿಂಚು ಹೊಳೆದು ಬೆಳಕು ಚೆಲ್ಲುತ್ತದೆ. ಅಧಿಕಾರಕ್ಕೆ ಬಂದ ಮೇಲೆ ಆಳುವವರ ಪೀಠ ಪ್ರೀತಿಯಿಂದ ನಾಡವರ ಈ ಆಸೆ ಕರಗಿ ಕಮರಿ ಕತ್ತಲಾಗುತ್ತದೆ. ಇದಕ್ಕೆ ಇಂದಿನ ಸರ್ಕಾರವೂ ಹೊರತಾಗಿರಲಿಲ್ಲ ಎನ್ನಲು ನನಗೆ ಅತ್ಯಂತ ವಿಷಾದವಾಗುತ್ತದೆ. ಈಗ ಕನ್ನಡದ ಪ್ರಗತಿ ಎಂದರೆ ಒಂದು ಹೆಜ್ಜೆ ಮುಂದೆ ಹೋದಂತೆ ಮಾಡುವುದು, ಒಡನೆಯೇ

ಎರಡು ಹೆಜ್ಜೆ ಹಿಂದಕ್ಕೆ ಸರಿಯುವುದು; ಮುಂದಿಟ್ಟ ಒಂದು ಹೆಜ್ಜೆಗೆ ಇನ್ನಿಲ್ಲದ ಸಡಗರ, ಸಂಭ್ರಮ, ಉತ್ಸಾಹ, ಜಾಹೀರಾತು; ಹಿಂದಿಡುವ ಎರಡು ಹೆಜ್ಜೆಗೆ ತರ್ಕ, ಸಿದ್ಧಾಂತ, ನ್ಯಾಯದ ಸಲುವಳಿ ಮೊದಲಾದ ವಾದ ವಿವಾದ. ಇದಕ್ಕೆ ಅತ್ಯುತ್ತಮ ಉದಾಹರಣೆ ಎಂದರೆ, ಕನ್ನಡವನ್ನು ಕುರಿತ ಸರ್ಕಾರದ ಈಚಿನ ನಿಲುವುಗಳು, ನಿರ್ಧಾರಗಳು ಅವುಗಳ ಪರವಾದ ಪ್ರತಿಪಾದನೆ. ಇದು ಅತ್ಯಂತ ದುರ್ದೈವದ ಸಂಗತಿ" (ಪುಟ೩). ನವೆಂಬರ್ ೧, ೧೯೮೩ರಂದು ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗ್ಗಡೆಯವರಿಂದ ೧೯೮೨ರ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ಸ್ವೀಕರಿಸಿ, ಪ್ರಶಸ್ತಿ ವಿಜೇತರ ಪರವಾಗಿ ಮಾಡಿದ ಭಾಷಣದ ಒಂದು ಭಾಗವಿದು.

೧.೨.೫: ಅಂಕಣ, ಆಕಾಶವಾಣಿ ಬರಹಗಳು:

ಒಬ್ಬ ವ್ಯಕ್ತಿಯ ವ್ಯಕ್ತಿತ್ವಕ್ಕೆ ನಾನಾಮುಖಗಳಿರುತ್ತವೆ. ಇದು ಆಯಾ ವ್ಯಕ್ತಿಯ ದೃಷ್ಟಿ, ಧೋರಣೆ ಹಾಗೂ ಆಸಕ್ತಿಗಳಿಗೆ ಅನುಗುಣವಾಗಿ ಹೆಚ್ಚಾಗುತ್ತವೆ, ಇಲ್ಲವೇ ಕಡಿಮೆಯಾಗುತ್ತವೆ. ಆ ವ್ಯಕ್ತಿ ಯಾವ ಯಾವ ಮುಖಗಳಿಗೆ ಆಸಕ್ತಿ ಕೊಡುತ್ತಾನೆ ಎಂಬುದರ ಮೇಲೆ ಆಯಾ ಮುಖಗಳ ಬೆಳವಣಿಗೆಯಾಗುತ್ತದೆ. ವ್ಯಕ್ತಿತ್ವದ ಅಭಿರುಚಿ ಕೂಡ ಹೀಗೆಯೇ ಇರುತ್ತದೆ. ಡಾ. ಹಾ.ಮಾ.ನಾಯಕರು ತಮ್ಮ ಅಭಿರುಚಿಗೆ ತಕ್ಕಂತೆ, ನಾಡಿನ ಸಾಂಸ್ಕೃತಿಕ ಬದುಕಿನಲ್ಲಿ ಅಗತ್ಯವಾಗಿ ನಡೆಯಬೇಕಾದ ಹತ್ತು ಹಲವು ಚಟುವಟಿಕೆಗಳಲ್ಲಿ, ಕಾರ್ಯಕ್ಷೇತ್ರಗಳಲ್ಲಿ ಪ್ರಯೋಗ ನಡೆಸಿ, ತಮ್ಮ ಪ್ರತಿಭೆ ಹಾಗೂ ಪರಿಣತಿಗಳಿಗೆ ಸೂಕ್ತವೆನಿಸಿದ ಕೆಲಸಗಳಲ್ಲಿ ತೊಡಗಿದರು. ಅಂತಹ ಕೆಲಸಗಳಲ್ಲಿ ಅಂಕಣ ಬರವಣಿಗೆಯೂ ಒಂದು. ಈಚಿನ ದಿನಗಳಲ್ಲಂತೂ ಹಾ.ಮಾ.ನಾಯಕ ಅವರು ತಮ್ಮ ಬಹುಪಾಲು ಗಮನವನ್ನು ಅಂಕಣ ಸಾಹಿತ್ಯಕ್ಕೆ ಮೀಸಲಿಟ್ಟಿದ್ದಾರೆ. ಪ್ರಸ್ತುತ ಪ್ರಕಾರದಲ್ಲಿ ಹಾ.ಮಾ.ನಾಯಕರ ಅಂಕಣ ಆಕಾಶವಾಣಿ ಚಿಂತನ ಸಾಹಿತ್ಯಗಳ ಬಗೆಗೆ ಪರಿಶೀಲಿಸಲಾಗುವುದು. ಈವರೆಗೆ ಹಾ.ಮಾ.ನಾಯಕರವರ ಒಂಬತ್ತು ಅಂಕಣಗಳು ಏಳು ಪತ್ರಿಕೆ ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಅವುಗಳೆಂದರೆ,

೧. ಸಾಹಿತ್ಯ ಸಲ್ಲಾಪ - ಕನ್ನಡಪ್ರಭ

೨. ತಿಂಗಳ ಪುಸ್ತಕ - ಗ್ರಂಥಲೋಕದ ಸುತ್ತಮುತ್ತ, ತಿಂಗಳ ಆಯ್ಕೆ - ಗ್ರಂಥಲೋಕ

೩. ಹಾ.ಮಾ.ನಾಯಕ ಬರೆಯುತ್ತಾರೆ - ಪ್ರಜಾಮತ

೪. ವರ್ತಮಾನ - ಇಂಚರ

೫. ಸಂಪ್ರತಿ - ಪ್ರಜಾವಾಣಿ

೬. ಪುಸ್ತಕ ಪ್ರಸಂಗ - ಸಂಕೇತ

೭. ಸ್ವಗತ -ತರಂಗ

ಹಾ.ಮಾ.ನಾಯಕರವರ ಮೊತ್ತಮೊದಲ ಅಂಕಣ ಸಾಹಿತ್ಯ ಸಲ್ಲಾಪ, ಇತ್ತೀಚಿನದು ಸ್ವಗತ. ಈ ಅಂಕಣಗಳು ಪುಸ್ತಕದ ಮಹತ್ವವನ್ನು ತಿಳಿಸುವ ಅಂಕಣಗಳಾಗಿವೆ. ಸಾಹಿತ್ಯ ಸಲ್ಲಾಪ, ಡಾ.ಹಾ.ಮಾ.ನಾಯಕ ಬರೆಯುತ್ತಾರೆ, ಸಂಪ್ರತಿ ಅಂಕಣಗಳು ಹಲವು ವೇಳೆ ಮುಖ್ಯವಾಗಿ ಕೆಲವು ಬಾರಿ ಆನುಷಂಗಿಕವಾಗಿ ಪುಸ್ತಕಗಳನ್ನು ಅವುಗಳ ಪ್ರಾಮುಖ್ಯವನ್ನು ಎತ್ತಿ ಹಿಡಿಯುತ್ತವೆ. ತಿಂಗಳ ಆಯ್ಕೆ ಅನೇಕ ಕಾರಣಗಳಿಂದ ಆಯಾ ತಿಂಗಳಲ್ಲಿ ಗಮನಾರ್ಹವೆನಿಸಿದ ಯಾವುದಾದರೊಂದು ಪುಸ್ತಕದ ಭಾಗವನ್ನು ಆಯ್ಕೆ ಮಾಡುತ್ತದೆ. ವರ್ತಮಾನ ಅಂಕಣ ಮಾತ್ರ ಪ್ರಮುಖವಾಗಿ ಸಾಮಾಜಿಕ, ಶೈಕ್ಷಣಿಕ, ರಾಜಕೀಯ ವಿಚಾರಗಳನ್ನು ಕೇಂದ್ರವಾಗಿಟ್ಟುಕೊಂಡಿದೆ. ಅಂಕಣ ಸಾಹಿತ್ಯವನ್ನು ಹಾ.ಮಾ.ನಾಯಕರವರು ಪುಸ್ತಕ ರೂಪದಲ್ಲಿ ತಂದಾಗ ಕೆಲವು ಕಡೆ ಅಂಕಣವೇ ಅಂಕಣ ಬರಹಗಳ ಸಂಕಲನಕ್ಕೂ ಹೆಸರು ನೀಡಿರುವುದುಂಟು. ಕನ್ನಡದಲ್ಲಿ ಅಂಕಣ ಸಾಹಿತ್ಯದಲ್ಲಿ ಸತತ ಕೃಷಿ ಮಾಡಿ, ಅದಕ್ಕೊಂದು ಶಿಷ್ಟ ರೂಪ ತಂದುಕೊಟ್ಟು, ರಾಷ್ಟ್ರಮಟ್ಟದಲ್ಲಿ ಮನ್ನಣೆ ಗಳಿಸಿಕೊಟ್ಟವರು ಹಾ.ಮಾ.ನಾಯಕರು. ಬೇರೆ ಬೇರೆ ಪತ್ರಿಕೆಗಳಲ್ಲಿ ಬರೆದ ಅಂಕಣ ಸಾಹಿತ್ಯವನ್ನು ಪುಸ್ತಕಗಳ ರೂಪದಲ್ಲಿ ಪ್ರಕಟಿಸಿದರು. ಅವುಗಳೆಂದರೆ, ಗ್ರಂಥಲೋಕದ ಸುತ್ತಮುತ್ತ (೧೯೮೪), ಸಂಪದ (೧೯೮೧), ಸಂಪರ್ಕ (೧೯೮೨), ಸಂಪುಟ (೧೯೮೦), ಸಂಪ್ರತಿ (೧೯೮೮), ಸಂವಹನ (೧೯೮೩), ಸಮೂಹ (೧೯೮೨), ಸಲ್ಲಾಪ (೧೯೭೨), ಸಾಂಪ್ರತ (೧೯೮೩), ಸಾಹಿತ್ಯ ಸಲ್ಲಾಪ (೧೯೭೦), ಸೂಲಂಗಿ (೧೯೮೫), ಸಂಬಲ (೧೯೯೦), ಸಂಪ್ರತಿ-೨ (೧೯೯೧), ಸಂಪ್ರತಿ -೩ (೧೯೯೧), ಅರುವತ್ತರ ಆರಲು (ಸ್ವಗತ ಅಂಕಣ ಬರಹಗಳು) ಸಂಪುಟ -೧ (೧೯೯೫) ಕೃತಿಗಳನ್ನು ಪ್ರಕಟಿಸಿದ್ದಾರೆ.

'ಗ್ರಂಥಲೋಕದ ಸುತ್ತಮುತ್ತ' ಕೃತಿ, ಲೇಖಕರು ಗ್ರಂಥಲೋಕ ಪತ್ರಿಕೆಯ 'ಗ್ರಂಥಲೋಕದ ಸುತ್ತಮುತ್ತ' ಹೆಸರಿನ ಅಂಕಣದಲ್ಲಿ ಪ್ರಕಟವಾದ ಲೇಖನಗಳ ಸಂಕಲನ. ಇದರಲ್ಲಿ ೧೯೮೧ರ ಅಕ್ಟೋಬರ್ ತಿಂಗಳಿಂದ ೧೯೮೩ರ ಡಿಸೆಂಬರ್ ತಿಂಗಳವರೆಗೆ ಗ್ರಂಥಲೋಕದಲ್ಲಿ ಪ್ರಕಟವಾದ ಇಪ್ಪತ್ತೇಳು ಲೇಖನಗಳಿವೆ. ಇವು ತಾವು ಪ್ರಕಟವಾಗುವ ಅವಧಿಯ ಸ್ಪಷ್ಟ ಸೂಚನೆಯನ್ನು ಕೊಡುತ್ತವೆ. 'ಸಂಪದ' ಕೃತಿಯಲ್ಲಿ ಲೇಖಕರು ೧೯೭೯ ಮತ್ತು ೧೯೮೦ರಲ್ಲಿ ಅಚ್ಚಾದ ಕನ್ನಡದ ಪ್ರಸಿದ್ಧವೂ, ವಿಶಿಷ್ಟವೂ ಆದ ಪುಸ್ತಕಗಳ ಪರಿಶೀಲನೆಯಿದೆ. ಕಾವ್ಯ, ಪ್ರವಾಸ ಕಥನ, ಆತ್ಮಕಥನ, ವ್ಯಕ್ತಿ ಚಿತ್ರಗಳು ಇರುವ ಗ್ರಂಥಗಳ ಅಂತರಂಗದ ಚೆಲುವನ್ನು ಇಲ್ಲಿನ ಬರಹಗಳು ಸೆರೆಹಿಡಿದಿದೆ. ಪ್ರತಿಯೊಂದು ಪುಸ್ತಕದ ಬಗೆಗೂ ಆಳವಾಗಿ ಅಧ್ಯಯನ ಮಾಡಿ, ಅವುಗಳ ಬಗೆಗೆ ಪರಿಶೀಲಿಸಿ ಬರೆದಿದ್ದಾರೆ. ಡಾ.ಹಾ.ಮಾ.ನಾಯಕರ 'ಸಂಪರ್ಕ', 'ಸಂವಹನ', 'ಸಮೂಹ', ಕೃತಿಗಳು ಪ್ರಜಾಮತ ವಾರಪತ್ರಿಕೆಯಲ್ಲಿ ಪ್ರಕಟವಾದ ಕಲೆ, ಸಾಹಿತ್ಯ, ಸಂಸ್ಕೃತಿ, ಶಿಕ್ಷಣ ಕುರಿತ ಸ್ಥಿರಶೀರ್ಷಿಕೆ ಹೊತ್ತ ಅಂಕಣದಲ್ಲಿ ಹೊರಬಂದ ಬರಹಗಳ ಬಳಗಕ್ಕೆ ಸೇರಿದವು. ಮೂರರಲ್ಲಿಯೂ ನಿರಭ್ರ ಶೈಲಿಯಲ್ಲಿರುವ ವಿಚಾರ ಸಂಪತ್ತು, ವಿಪುಲ ಸಾಮಗ್ರಿಯ ಶ್ರೀಮಂತ ಭಂಡಾರ, ಲೇಖಕರ ಆಳವೂ, ವಿಸ್ತಾರವಾದ ಅಧ್ಯಯನಕ್ಕೆ ಹಿಡಿದ

ಕನ್ನಡಿಯಾಗಿದೆ. ಇವುಗಳ ಬಗ್ಗೆ ಎಚ್ಚೆಸ್ಕೆಯವರು ಹೇಳುವುದೇನೆಂದರೆ, "ಹಾ.ಮಾ.ನಾ.ರವರ ಗದ್ಯದಲ್ಲಿ ಅರ್ಥ ಮಡುಗಟ್ಟಿ ನಿಲ್ಲುತ್ತದೆ. ಕಣ್ಣಿಗೆ ಕಟ್ಟುವಂತೆ ಚಿತ್ರದ ಸೃಷ್ಟಿಯಾಗುತ್ತದೆ. ಇದೇನು ಸಾಮಾನ್ಯವಾದ ಸಾಧನೆಯಲ್ಲ. ಹಲವು ವರ್ಷಗಳಿಂದ ಪತ್ರಿಕೆಗಳಲ್ಲಿ ಬರೆಯುತ್ತಿರುವ ನಾನು ಓದುಗರ ಗಮನ ಸೆಳೆಯಲು ಏನೇನೋ ಚಮತ್ಕಾರ ಮಾಡುತ್ತೇನೆ. ಆದರೆ ಅಂಥ ಯಾವ ಚಮತ್ಕಾರವನ್ನೂ ಮಾಡದೆ ಓದುಗನನ್ನು ಆಕರ್ಷಿಸುವ ಅವರ ಶೈಲಿಯನ್ನು ನೋಡಿ ನಾನು ಅನೇಕ ಸಾರಿ ಅಸೂಯೆ ಪಟ್ಟಿದ್ದೇನೆ. ನಮ್ಮ ಕನ್ನಡ ಅಧ್ಯಾಪಕರಲ್ಲಿ ಅನೇಕರು ಕನ್ನಡದ ಗಡಿಯನ್ನು ಬಿಟ್ಟು ಆಚೀಚೆ ಸರಿಯುವುದಿಲ್ಲ. ಅಲ್ಲಿಂದಾಚೆಗೆ ತಮ್ಮ ವ್ಯಾಸಂಗವನ್ನು ವಿಸ್ತರಿಸುವುದಿಲ್ಲ, ದೃಷ್ಟಿಯನ್ನು ವಿಸ್ತರಿಸಿಕೊಳ್ಳುವುದಿಲ್ಲ. ಆದರೆ ಹಾ.ಮಾ.ನಾಯಕರವರ ಮನಸ್ಸಿಗೆ ಗಡಿಗಳೆಂಬುದೇ ಇಲ್ಲ. ಅವರದು ಕನ್ನಡದ ನೆಲೆಯಲ್ಲಿ ಗಟ್ಟಿಯಾಗಿ ಊರಿನಿಂತ ವಿಶ್ವದೃಷ್ಟಿ- ಆದ್ದರಿಂದಲೇ ಅವರ ಬರವಣಿಗೆಯ ಗುಣ, ಪರಿಣಾಮ ಅನನ್ಯವಾದಂಥವು" (ಸಮನ್ವಯ ೧-೯-೧೯೮೨).

ಡಾ.ಹಾ.ಮಾ.ನಾಯಕರ 'ಸಾಂಪ್ರತ' ಕೃತಿಯಲ್ಲಿ ಐವತ್ತೆರಡು ಲೇಖನಗಳಿವೆ. ಇವುಗಳು 'ಪ್ರಜಾಮತ' ವಾರಪತ್ರಿಕೆಯಲ್ಲಿ ಪ್ರಕಟವಾದ 'ಡಾ.ಹಾ.ಮಾ.ನಾಯಕ ಬರೆಯುತ್ತಾರೆ' ಅಂಕಣ ಲೇಖನಗಳು. ಇವುಗಳಲ್ಲಿರುವ ಅಪಾರವಾದ ವಿಷಯ ವೈವಿಧ್ಯಕ್ಕೆ ಕಾಲಗಳ ಕಟ್ಟಿಲ್ಲ. ಆದರೂ ಈ ಲೇಖನಗಳಲ್ಲಿ ವರ್ತಮಾನಕ್ಕೆ ಪ್ರಾಶಸ್ತ್ಯವಿದೆ. ಈ ವೈವಿಧ್ಯಕ್ಕೆ ಮುಖ್ಯ ಕಾರಣ ನಾಯಕರ ಬಹುಮುಖ ಆಸಕ್ತಿ, ತೆರೆದ ಕಣ್ಣು, ತೆರೆದ ಮನಸ್ಸು ಮುಂತಾದವುಗಳಾಗಿವೆ. 'ಸ್ಪಂದನ' ಕೃತಿಯು ಐ.ಬಿ.ಎಚ್. ಪ್ರಕಾಶನ ಸಂಸ್ಥೆಯು ಪ್ರಕಟಿಸುತ್ತಿದ್ದ 'ಇಂಚರ' ಮಾಸಪತ್ರಿಕೆಯಲ್ಲಿ 'ವರ್ತಮಾನ' ಎಂಬ ಹೆಸರಿನಿಂದ ಬೆಳಕು ಕಂಡ ಹದಿನೆಂಟು ಅಂಕಣಗಳ ಸಂಕಲನ. ಇದರಲ್ಲಿ ಶಾಲೆ, ಶಿಕ್ಷಣ, ಮಾತೃಭಾಷೆ, ಪತ್ರಿಕೆಗಳು, ಚುನಾವಣೆಗಳು, ಅಕಾಡೆಮಿಗಳ ಉದ್ದೇಶ ಮುಂತಾದ ವಿಷಯಗಳ ವಿವೇಚನೆ ಪ್ರತಿಕ್ರಿಯೆಗಳು ಇವೆ. ಇವರ 'ಸಂಪುಟ' ಕೃತಿ, ಗ್ರಂಥಲೋಕದಲ್ಲಿ ಪ್ರಕಟವಾದ 'ತಿಂಗಳ ಪುಸ್ತಕ' ಅಂಕಣ ಬರಹಗಳ ಮೊದಲನೆಯ ಸಂಪುಟ. ಇದರಲ್ಲಿ ಇಪ್ಪತ್ತೆರಡು ಕೃತಿಗಳನ್ನು ಕುರಿತು ವಿಮರ್ಶಾ ಲೇಖನಗಳಿವೆ. 'ಸಲ್ಲಾಪ' ಕೃತಿ, 'ಕನ್ನಡಪ್ರಭ', ದಿನಪತ್ರಿಕೆಯಲ್ಲಿ ಸೋಮವಾರದ ಸಾಹಿತ್ಯ ಪುಟದಲ್ಲಿ ಪ್ರಕಟವಾದ ಸಾಹಿತ್ಯ ಸಲ್ಲಾಪ ಅಂಕಣ ಲೇಖನಗಳ ಎರಡನೆಯ ಸಂಪುಟ. ಸಲ್ಲಾಪದಲ್ಲಿ ೧೨೩ ಲೇಖನಗಳಿವೆ. ಇಲ್ಲಿನ ವಿಷಯ ಮತ್ತು ವಿಚಾರ ಸಂಪತ್ತು, ವಿಷಯದ ವೈವಿಧ್ಯ, ಅನುಭವ ವಿಸ್ತಾರ, ಭಾವನಾ ವಿಲಾಸ, ಉನ್ನತ ವ್ಯಕ್ತಿಗಳ ವ್ಯಕ್ತಿತ್ವದ ಬಗೆಗಿನ ಚಿತ್ರಣವಿದೆ. ಇವರ ವಿಶಿಷ್ಟತೆಯಲ್ಲಿ ಒಂದಾದ ಪೂರ್ವಾಗ್ರಹ ಮುಕ್ತವಾದ, ತೂಕತಪ್ಪದ ವಿಮರ್ಶೆಯಿರುವುದನ್ನು ಕಾಣಬಹುದು. ಹೀಗಾಗಿ ಇವರಲ್ಲಿ ನಾಡಿನ ಸಂಸ್ಕೃತಿಯನ್ನು, ದೇಶದ ಸಂಸ್ಕೃತಿಯನ್ನು ಪ್ರತಿಭಾವಂತ ವ್ಯಕ್ತಿ, ಸತ್ಯ ನಿಷ್ಠುರ ದೃಷ್ಟಿಯಿಂದ ನೋಡುವ ರೀತಿ ನಮಗೆ ಗೋಚರವಾಗುತ್ತದೆ.

ಡಾ. ಹಾ.ಮಾ.ನಾಯಕರ ಅಂಕಣ ಸಾಹಿತ್ಯಕ್ಕೆ ಸಂಬಂಧಿಸಿದ 'ಸಾಹಿತ್ಯ ಸಲ್ಲಾಪ' ಕೃತಿಯು ಅವರು ಕನ್ನಡ ದಿನಪತ್ರಿಕೆಯ ವಾರದ ಅಂಕಣಕ್ಕೆ ಕೊಟ್ಟ ಸ್ಥಿರ ಶೀರ್ಷಿಕೆಯಾದ'ಸಾಹಿತ್ಯ ಸಲ್ಲಪ'ದ ಬರಹಗಳು. ಇಲ್ಲಿಯ ಲೇಖನಗಳು ಕನ್ನಡದ ವಿವಿಧ ಸಮಸ್ಯೆಗಳ ವಿವಿಧ ಮುಖಗಳನ್ನು ಚರ್ಚಿಸುತ್ತವೆ. ಕರ್ನಾಟಕದ ಎಲ್ಲಾ ಕ್ಷೇತ್ರಗಳ ಆಡಳಿತ ವ್ಯವಹಾರಗಳಲ್ಲಿ ಕನ್ನಡಕ್ಕೆ ನ್ಯಾಯವಾಗಿ ದೊರೆಯಬೇಕಾದ ಸ್ಥಾನಮಾನಗಳ, ಭಾಷಾಸಮಸ್ಯೆಯ ಪ್ರಸ್ತಾಪ ಮತ್ತು ಆ ಕುರಿತ ಒಂದು ನಿರ್ದಿಷ್ಟವಾದ ಧೋರಣೆ ವ್ಯಕ್ತವಾಗಿರುವುದನ್ನು ಕಾಣಬಹುದು. ಇವುಗಳು ಆಯಾ ವಾರದ ಗಮನಾರ್ಹ ಸಾಹಿತ್ಯವಾಗಿದೆ. ಸಾಂಸ್ಕೃತಿಕ ಸಂಗತಿಗಳನ್ನು ಚರ್ಚಿಸಲು ಉದ್ದೇಶಿಸಿದ ಈ ನಿಯತಕಾಲಿಕ. ಬರಹಗಳು ಒಂದು ಅರ್ಥದಲ್ಲಿ ಸಮಯ ಸಾಹಿತ್ಯವಾಗಿದೆ. ಇನ್ನೊಂದು ಅರ್ಥದಲ್ಲಿ ಸಮಯಾತೀತ ಸಾಹಿತ್ಯವಾಗಿದೆ. ಆಯಾ ವಾರದ ಸಂಗತಿಗಳ ನೆಪದಲ್ಲಿ ಚಿರಂತನವಾದ, ಮೂಲಭೂತವಾದ ಹಲವು ವಿಷಯಗಳನ್ನು ಚರ್ಚಿಸುವುದರಿಂದ, ಇಲ್ಲಿಯ ಸಾಹಿತ್ಯ, ಸಂಸ್ಕೃತಿ ಸಂಬಂಧವಾದ ಸಂಗತಿಗಳಿಗೆ ಕಾಲದೇಶಗಳ ಎಲ್ಲೆ ಇಲ್ಲ . 'ರಾಮಾಯಣದಿಂದ ರಂಗಯ್ಯನವರೆಗೆ, ಬಂಕಿಮಚಂದ್ರನಿಂದ ಸಿಂಕ್ಲೇರನವರೆಗೆ ಇವುಗಳ ಹರವು' - ಎಂಬ ಪುಸ್ತಕದ ಬೆನ್ನುಡಿಯ ಮಾತುಗಳು ಇಲ್ಲಿನ ಒಟ್ಟು ತಾತ್ಪರ್ಯವನ್ನು ಬಿಂಬಿಸುತ್ತವೆ. 'ಸಂಬಲ' ಕೃತಿ 'ಸಂಕೇತ' ಪಕ್ಷಪತ್ರಿಕೆಯಲ್ಲಿ ಪ್ರಕಟವಾದ 'ಪುಸ್ತಕ ಪ್ರಸಂಗ' ಅಂಕಣ ಬರಹಗಳ ಸಂಕಲನ. ಆಗಸ್ಟ್ ೩, ೧೯೮೯ರಿಂದ ನವೆಂಬರ್ ೧೧, ೧೯೯೦ರವರೆಗಿನ ಲೇಖನಗಳು ಈ ಪುಸ್ತಕದಲ್ಲಿವೆ.

'ಸಂಪ್ರತಿ', ಸಂಪ್ರತಿ ಎರಡು ಮತ್ತು ಮೂರು ಕೃತಿಗಳಲ್ಲಿ ಸಂಪ್ರತಿ ೧೯೮೫ ಮತ್ತು ೧೯೮೬ರಲ್ಲಿ ಪ್ರಜಾವಾಣಿಯಲ್ಲಿ ಪ್ರಕಟಿಸಿದ ಇದೇ ಹೆಸರಿನ ಅಂಕಣ ಬರಹಗಳ ಸಂಕಲನ. ಈ ಸಂಕಲನ ಡಾ.ಹಾ.ಮಾ.ನಾಯಕರಿಗೆ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ದೊರಕಿಸಿಕೊಟ್ಟದ್ದು ಮತ್ತು ಭಾರತೀಯ ಭಾಷೆಗಳಲ್ಲಿ ಅಂಕಣ ಬರಹ ಸಂಕಲನಕ್ಕೆ ಅಂಥ ಪ್ರಶಸ್ತಿ ದೊರಕಿದ್ದು ಮೊದಲ ಬಾರಿಗೆ. ಸಂಪ್ರತಿ ಎರಡು ಮತ್ತು ಮೂರರಲ್ಲಿ ಕ್ರಮವಾಗಿ ಜನವರಿ ೪, ೧೯೮೭ರಿಂದ ಡಿಸೆಂಬರ್ ೨೫, ೧೯೮೮ರವರೆಗಿನ ತೊಂಬತ್ತಾರು ಲೇಖನಗಳು; ಜನವರಿ ೧, ೧೯೮೯ರಿಂದ ಸೆಪ್ಟೆಂಬರ್ ೨, ೧೯೯೦ರವರೆಗಿನ ಎಂಬತ್ತೆಂಟು ಅಂಕಣ ಲೇಖನಗಳಿವೆ. ಸಂಪ್ರತಿಯಲ್ಲಿರುವ ಲೇಖನಗಳ ವಿಷಯಗಳು ವೈವಿಧ್ಯಮಯವಾಗಿದ್ದು, ವಿಶಾಲವಾದ ಹರಹೂ ಪಡೆದಿವೆ. ಸಂಪ್ರತಿ ಎಂದರೆ ವರ್ತಮಾನ ಕಾಲ, ಸದ್ಯದ ಪರಿಸ್ಥಿತಿ. ಅದಕ್ಕನುಗುಣವಾಗಿ ಸಮಕಾಲೀನ ವಿಚಾರಗಳನ್ನು ನಿರ್ಭೀತವಾಗಿ ಮುಕ್ತವಾಗಿ ಈ ಅಂಕಣದಲ್ಲಿ ಹಾ.ಮಾ.ನಾಯಕರು ಚರ್ಚೆಗೊಳಪಡಿಸಿದ್ದಾರೆ. ಸಂಪ್ರತಿಯ ಲೇಖನಗಳ ಬಗೆಗೆ ಹಾ.ಮಾ.ನಾಯಕರು 'ಓದುಗರಿಗೆ ಒಂದು ರೀತಿಯ ಜನತಾ ಶಿಕ್ಷಣದ ಪ್ರಯೋಜನವಾಗುತ್ತಿರುವುದು ನನ್ನ ಗಮನಕ್ಕೆ ಬಂದಿದೆ' ಎಂಬುದಾಗಿ ಹೇಳುತ್ತಾರೆ. ಅವರೇ ಮುಂದುವರೆದು ಅಂಕಣ

ಬರಹದ ಬಗೆಗೆ ಮತ್ತು ತಮ್ಮ ಬಗೆಗೆ ಇರುವ ಟೀಕೆಯ ಬಗ್ಗೆ "ನನ್ನನ್ನು ಒಬ್ಬ ಅಂಕಣಕಾರನೆಂದು ವಿಮರ್ಶಕರು ಕರೆಯುತ್ತಾರೆ. ಪತ್ರಿಕೆಗಳ ಅಂಕಣಗಳಲ್ಲಿ ನಿಯತವಾಗಿ ಬರೆಯುವಾಗಲೂ ಸಾಹಿತ್ಯಿಕ, ವಿಮರ್ಶಕ ದೃಷ್ಟಿಯನ್ನು ಕಡೆಗಣಿಸುವುದಿಲ್ಲ. ಅದನ್ನು ಬರಿಯ ವರದಿಯನ್ನಾಗಿಸುವುದಿಲ್ಲ. ಈ ಬಗೆಯ ಬರಹಗಳಲ್ಲಿ ಸಾಹಿತ್ಯದ ಸೊಗಡನ್ನು ಅನೇಕರು ಗುರುತಿಸಿದ್ದಾರೆ. ಅಂಕಣ ಬರಹಗಳಲ್ಲಿ ಅಂದಂದಿನ ಅನೇಕ ಸಂಗತಿಗಳಿಗೆ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸುತ್ತೇನೆ. ಈ ಅಭಿವ್ಯಕ್ತಿಯ ಕ್ರಮವನ್ನೇ ಜನರು ಮೆಚ್ಚಿದ್ದಾರೆ. ಸಾಹಿತ್ಯ ಮಾಡಬಹುದಾದ ಕೆಲಸವನ್ನೇ ಈ ಅಂಕಣ ಬರಹಗಳು ಅನೇಕ ರೀತಿಯಲ್ಲಿ ನಿರ್ವಹಿಸುತ್ತವೆ. ಒಂದು ನಿರ್ದಿಷ್ಟ ಅವಧಿಯಲ್ಲಿ ಇವು ಸಿದ್ಧಗೊಳ್ಳಬೇಕಾಗಿ ಬರುವುದರಿಂದ ಎಲ್ಲ ಬರಹಗಳಲ್ಲಿಯೂ ಒಂದೇ ಮಟ್ಟವನ್ನು ನಿರೀಕ್ಷಿಸಲು ಬರುವುದಿಲ್ಲ ಎಂಬುದು ನಿಜವಾದರೂ ಅವುಗಳು ಗುರಿಯನ್ನು ತಲುಪದೇ ಹೋಗುವುದಿಲ್ಲ..." (ಸಿಂಚನ. ಪುಟ.೪೭).

'ಅರುವತ್ತರ ಆರಲು' ಕೃತಿ ತರಂಗದಲ್ಲಿ ಪ್ರಕಟವಾದ 'ಸ್ವಗತ' ಹೆಸರಿನ ಅಂಕಣ ಬರಹಗಳ ೯೧ ಲೇಖನಗಳ ಸಂಕಲನ. ಇಲ್ಲಿಯ ಲೇಖನಗಳ ವಸ್ತು ರಾಜ್ಯದ, ರಾಷ್ಟ್ರದ, ವಿಶ್ವದ ಸಾಹಿತ್ಯಿಕ -ಸಾಂಸ್ಕೃತಿಕ ವಿಚಾರ ವೈಶಿಷ್ಟ್ಯಗಳಾಗಿದ್ದು, ಇಲ್ಲಿಯ ಬರಹಗಳಲ್ಲಿ ವ್ಯಕ್ತವಾಗುವ ಶೈಕ್ಷಣಿಕ ಕಾಳಜಿ, ದೇಶದ ರಾಜ್ಯದ ಪ್ರಗತಿಯ ಹಿನ್ನೆಲೆಯಲ್ಲಿ ನಾಯಕರ ಆಡಳಿತಾತ್ಮಕ ದೂರದೃಷ್ಟಿ ಸೂಚನೆ- ಎಚ್ಚರಿಕೆಗಳು ನಮ್ಮ ರಾಜಕೀಯ ಮುಖಂಡರಿಗೆ, ಅಧಿಕಾರಿಗಳಿಗೆ ಮಾರ್ಗದರ್ಶಿಯಾಗುತ್ತವೆ. ವ್ಯವಸ್ಥೆಯ ವಿಫಲತೆಯಿಂದಾಗಿ ಅಪಸಂಸ್ಕೃತಿಯನ್ನು ಬೆಳೆಸುವ ನಿರುದ್ಯೋಗ, ನಿರಾಶೆ, ಬಡತನ; ಅತೃಪ್ತಕಾಮನೆ, ವಿದ್ಯೆಯ ಪರಿಣಾಮಗಳ ಬಗ್ಗೆ ನಾಯಕರು ವ್ಯಥೆ ಪಡುತ್ತಾರೆ. ಅಲ್ಲದೆ ಭಾರತದ ಸಂಸ್ಕೃತಿಯನ್ನು ಬಯಸಿ ಬರುವವರು ಇಲ್ಲಿಯ ಅಪಸಂಸ್ಕೃತಿಯ ಕಾರಣದಿಂದ ಭ್ರಮನಿರಸನಕ್ಕೆ ಒಳಗಾಗುವುದು ನಿಶ್ಚಿತ ಎಂದು ಮರುಕ ಪಡುತ್ತಾರೆ. ಅರುವತ್ತರ ಆರಲುವಿನಲ್ಲಿ ಬದುಕಿನಲ್ಲಿ ನೋಡಿದ, ಕೇಳಿದ ಮಾತನಾಡಿದ ಸಾಹಿತಿಗಳ, ಸಾಧಕರ ಬಗ್ಗೆ ನಾಯಕರು ಸತ್ವಶಾಲಿಯಾಗಿ ಬರೆಯುತ್ತಾರೆ. ಎಂದೋ ನೋಡಿದ, ಮಾತನಾಡಿದ ನೆನಪಿನ ಎಳೆಯಿಂದಲೇ ಆ ವ್ಯಕ್ತಿ ಘಟನೆಗಳನ್ನು ಬಿಚ್ಚಿ ತೋರಿಸುತ್ತಾರೆ. ಅಲ್ಲಿ ಆ ವಸ್ತುವಿನ ಎರಡೂ ಮುಖಗಳನ್ನು ಅನಾವರಣಗೊಳಿಸುವ ಪ್ರತಿಭೆ ಅನನ್ಯವಾದುದು.

ಚಿಂತನ, ಸುಭಾಷಿತ, ಚೆನ್ನುಡಿ, ವಿಚಾರ ದೀಪಿಕೆ ಎಂಬ ಶೀರ್ಷಿಕೆಗಳಲ್ಲಿ ಮೈಸೂರು, ಬೆಂಗಳೂರು, ಗುಲ್ಬರ್ಗ ಆಕಾಶವಾಣಿ ಕೇಂದ್ರಗಳಿಂದ ಪ್ರಸಾರವಾದ ಕಿರುಲೇಖನಗಳ ಸಂಗ್ರಹಗಳನ್ನು ಹೊರ ತಂದಿದ್ದಾರೆ. ಮೊದಲನೆಯದು 'ಸೂಲಂಗಿ' (೧೯೭೮) . ಚಿಂತನಾ ಪ್ರಧಾನವಾದ ಪ್ರಬಂಧಗಳನ್ನೊಳಗೊಂಡಿದೆ. ಎರಡನೆಯದು 'ಸಂಗತಿ' (೧೯೮೭). ಪ್ರಸಂಗಪ್ರಧಾನವಾದ ಬರಹಗಳನ್ನುಳ್ಳದ್ದು. ಮೂರನೆಯದು 'ಸಂಪಣ' (೧೯೯೦) ಚಿಂತನಾಯುಕ್ತವಾದ ಕಿರು ಪ್ರಬಂಧಗಳು. ಇವರಲ್ಲಿಯ ಕಡೆಯ

ಐದು ಲೇಖನಗಳು ಆಕಾಶವಾಣಿಗಾಗಿ ಬರೆದವಲ್ಲ. ಸೂಲಂಗಿ ಕೃತಿಯಲ್ಲಿ ಮೂವತ್ತು ಲೇಖನಗಳಿದ್ದು, ಕೆಲವು ಹೊಸ ಚಿಂತನೆಗೆ ಅವಕಾಶ ನೀಡಿವೆ. ಹಾ.ಮಾ.ನಾಯಕರು ಇಲ್ಲಿ ಅಧಿಕಾರಿಗಳ ಬಗ್ಗೆ ಹೇಳುತ್ತ 'ಅರ್ಹತೆ ಪಡೆದವರು ಕೆಲವರು ಮಾತ್ರ, ಬಹುಪಾಲು ಅಧಿಕಾರಿಗಳಿಗೆ ಅದೊಂದು ಮುಖವಾಡ' ಎನ್ನುವ ಮಾತು ನಮ್ಮ ವ್ಯವಸ್ಥೆಯ ದೌರ್ಬಲ್ಯವನ್ನು ಗುರುತಿಸುತ್ತದೆ. 'ರಾಕ್ಷಸ' ಇನ್ನೊಂದು ಚಿಂತನೆ. ಪೌರಾಣಿಕ ನಂಬಿಕೆಗಳ ಹಿನ್ನೆಲೆಯಲ್ಲಿ ತಟಕ್ಕನೆ ಪ್ರಸ್ತುತಕ್ಕೆ ಧುಮುಕುವ ರೀತಿ ಇಲ್ಲಿ ಚೆನ್ನಾಗಿದೆ. ಇಂದಿನ ಮನುಷ್ಯ ರಾಕ್ಷಸನಂತೆ ವರ್ತಿಸಲು ಕಾರಣಗಳೇನು, ಮೂಲ ದೌರ್ಬಲ್ಯ ಯಾವುದು ಎಂದು ವಿಚಾರ ಮಾಡುತ್ತ 'ಕ್ರೌರ್ಯಗಳಲ್ಲೆಲ್ಲ ಭಯಾನಕವಾದುದೆಂದರೆ ಮನುಷ್ಯ ಮನುಷ್ಯನಿಗೆ ತೋರುವ ಕ್ರೌರ್ಯ' ಎಂದು ಹೇಳುವ ಮಾತು ಗಮನಾರ್ಹವಾದುದು.

೧.೨.೬. **ಅನುವಾದ:** ಹಾ.ಮಾ.ನಾಯಕರು ಮೂರು ಅನುವಾದ ಕೃತಿಗಳನ್ನು ತಂದಿದ್ದಾರೆ. ಅವುಗಳಲ್ಲಿ ಎರಡು ಮುಕ್ತ ಛಂದಸ್ಸಿನ ಕವನಸಂಕಲನಗಳು. ಒಂದು ಗದ್ಯ ಬರಹ, ಸಂಕ್ಷಿಪ್ತ ಜೀವನಚರಿತ್ರೆ. ಅವರು ಅನುವಾದ ಮಾಡಿರುವ ಕೃತಿಗಳೆಂದರೆ 'ಪ್ರಣಯ ಪದಾವಳಿ' (೧೯೮೪) 'ಶಾಂತಿಸ್ವರೂಪ್ ಭಟ್ನಾಗರ್' (೧೯೫೪), 'ಸುನೇರಿ' (೧೯೮೭). ಪ್ರಣಯ ಪದಾವಳಿ ಕೃತಿ ಮೈಥಿಲಿ ಭಾಷೆಯ ಕೋಗಿಲೆಯೆಂದೇ ಪ್ರಸಿದ್ಧನಾಗಿರುವ ವಿದ್ಯಾಪತಿಯ ಪದಾವಳಿಗಳಿಂದ ಆಯ್ದುಕೊಳ್ಳಲಾಗಿರುವ ಅರವತ್ತೊಂದು ಹಾಡುಗಳ ಕನ್ನಡ ಅನುವಾದ. ವಿದ್ಯಾಪತಿಯ ಸಾಹಿತ್ಯಿಕ ಮಹತ್ವ ಹಾ.ಮಾ.ನಾಯಕರನ್ನು ಸೆಳೆದಿದೆ. ಹಾ.ಮಾ.ನಾಯಕರವರೇ, 'ಈ ಅನುವಾದಗಳ ಮೂಲಕ ನಾನು ನಮ್ಮ ರಾಷ್ಟ್ರದ ಪ್ರಾಚೀನ ಮಹಾಕವಿಯೊಬ್ಬನನ್ನು ಕನ್ನಡ ಜನರಿಗೆ ಪರಿಚಯಮಾಡುವ ಪ್ರಯತ್ನ ಮಾಡಿದ್ದೇನೆ' ಎಂದಿದ್ದಾರೆ. ಶಾಂತಿ ಸ್ವರೂಪ್ ಭಟ್ನಾಗರ್ ಕೃತಿ ಶ್ರೀ ಕೆ.ವಿ. ಶ್ರೀನಾಥ್ ಅವರ ಅಪ್ರಕಟಿತ ಇಂಗ್ಲಿಷ್ ಮೂಲದಿಂದ ಸಿದ್ಧಪಡಿಸಿದ ಅನುವಾದ. ಶಾಂತಿಸ್ವರೂಪ್ ಭಟ್ನಾಗರರ ಸಂಕ್ಷಿಪ್ತ ಜೀವನ ಚರಿತ್ರೆ. ಸುನೇರಿ ಕೃತಿ ಜ್ಞಾನಪೀಠ ಪ್ರಶಸ್ತಿಪಡೆದ ಪಂಜಾಬಿನ ಪ್ರಸಿದ್ಧ ಕವಯಿತ್ರಿ, ಪದ್ಮಶ್ರೀ ಅಮೃತಾ ಪ್ರೀತಮ್ ಅವರ ಕೆಲವು ಕಿರುಕವಿತೆ ಹಾಗೂ ಆಯ್ದ ಕವಿತಾ ಭಾಗಗಳ ಕನ್ನಡಾನುವಾದ. ತಮ್ಮ ಅನುವಾದದ ಬಗೆಗೆ ಹಾ.ಮಾ.ನಾಯಕರವರು, 'ಮೂಲ ಪಂಜಾಬಿಯನ್ನು ಓದಿಸಿ ಕೇಳಿದ್ದರೂ, ಹಿಂದಿ ಅನುವಾದಗಳನ್ನು ಮತ್ತೆ ಮತ್ತೆ ನೋಡಿದ್ದ ಈ ಕನ್ನಡ ರೂಪಗಳು ಇಂಗ್ಲೀಷ್ ಅನುವಾದವನ್ನೇ ಆಧರಿಸಿದವುಗಳು ಎಂದು ಹೇಳಬೇಕು. ಹಿಂದೀ ಅನುವಾದಗಳನ್ನು ನೋಡಿದ್ದರಿಂದ, ಇಂಗ್ಲೀಷ್‌ನಿಂದ ಅಸ್ಪಷ್ಟವಾದ ಎಷ್ಟೋ ಭಾವಗಳು ಸ್ಪಷ್ಟವಾದವು. ಪಂಜಾಬಿಯನ್ನು ಕೇಳಿದ್ದರಿಂದ ಕೆಲವು ಸಂದರ್ಭಗಳಲ್ಲಾದರೂ ಮೂಲ ಪದಗಳನ್ನು ಉಳಿಸಿಕೊಳ್ಳುವುದು ಸಾಧ್ಯವಾಯಿತು. ಆದರೆ, ಸಮಾನ ಪದಗಳು ಬೇರೆ ಬೇರೆ ಅರ್ಥ ಪಡೆದಿರುವುದರಿಂದ ಎಲ್ಲವನ್ನೂ ಹಾಗೆಯೇ ಉಳಿಸಿಕೊಳ್ಳುವುದು ಸಾಧ್ಯವಾಗಲಿಲ್ಲ. ಪರ್ಷಿಯನ್ ಮೂಲದ ಪದಗಳೂ ಪಂಜಾಬಿಯಲ್ಲಿ ಹೇರಳವಾಗಿವೆ. ಅವುಗಳಲ್ಲಿ ಕೆಲವಾದರೂ ಅದೇ ಅರ್ಥದಲ್ಲಿ ಕನ್ನಡಿಗರಿಗೆ ಗೊತ್ತು. ಆದರೆ ಅವನ್ನು ಬಳಸಿದರೆ ಒಂದು ಬಗೆಯ ಕೃತಕತೆ ತೋರುತ್ತದೆ.

ಏಕೆಂದರೆ ಆ ಅರ್ಥದ ಸಹಜ ಪದಗಳು ನಮ್ಮಲ್ಲೇ ಇವೆ...' (ಮುನ್ನುಡಿ ಪು. ೯) ಎಂದಿದ್ದಾರೆ. ಅವರ ಈ ಪ್ರಾಮಾಣಿಕತೆ, ಆಸ್ಥೆ ಮತ್ತು ಎಚ್ಚರಗಳಿಂದಾಗಿಯೇ ಸುನೇರಿಯ ಕಥನಗಳು ನಮಗೆ ತುಂಬಾ ಸಹಜವೂ, ಅಕೃತಕವೂ ಆಗಿ ತೋರುತ್ತವೆ.

೧.೩: ಹಾ.ಮಾ.ನಾಯಕರ ಸಾಹಿತ್ಯ ಮತ್ತು ವ್ಯಕ್ತಿತ್ವ

ಕು.ಶಿ. ಹರಿದಾಸಭಟ್ಟ

"ಹಾ.ಮಾ.ನಾ. ಬರಹಗಳು ತಮಗಿಂತ ಪೂರ್ವದ ಮತ್ತು ಸಮಕಾಲೀನ ಬರಹಗಾರರಿಗಿಂತಲೂ ಹೆಚ್ಚಿನ ಯಶಸ್ಸು ಪಡೆದಿರುವುದು ಅತಿಶಯೋಕ್ತಿಯಲ್ಲ. ಈ ಶಕ್ತಿಯು ಬರಹಕ್ಕೆ ಬಂದದ್ದು ಅದರ ಅಖಿಲ ಕರ್ನಾಟಕ ಮಾತ್ರವೇ ಅಲ್ಲದೆ ಅಖಿಲ ಭಾರತೀಯವೆನಿಸುವ ಹಾಸು ಬೀಸುಗಳಿಂದ, ರಾಷ್ಟ್ರೀಯ ಹಿನ್ನೆಲೆ ಮುನ್ನೆಲೆಗಳಿಂದ ಮತ್ತು ಹಾ.ಮಾ.ನಾ.ರವರ ಅಂಕಣಗಳಲ್ಲಿ ಹಿಂದಿನ ಪೂರ್ವಾಚಾರ್ಯರಿದ್ದಾರೆ, ಇಂದಿನ ಆಧುನಿಕರಿದ್ದಾರೆ, ಮುಂದಿನ ತಂತುಗಳೂ ಇವೆ, ಜಟಿಲ ಸಮಸ್ಯೆಗಳಿಗೆ ಪರಿಹಾರಗಳೂ ಇವೆ." (ಮಾನ; ೧೯೯೨: ೫೪)

ಶಂಕರ ಮೊಕಾಶಿ ಪುಣೇಕರ

" ಈಗ ಬಹಳ ಉದ್ವೇಗಜನಕ ಕಾಲ. ಡಾ.ಹಾ.ಮಾ.ನಾಯಕರ ಸುಸಂಸ್ಕೃತ ಸಂವೇದನಾಶೀಲ ಮನಸ್ಸು ತನ್ನ ತಿಳಿ, ಓಜಸ್ವೀ ಶೈಲಿಯಲ್ಲಿ ಬರೆದ ನಿರ್ಭೀತ ಅಂಕಣಗಳು ಜನರ ಮೆಚ್ಚುಗೆ ಪಡೆಯುವುದು ಸ್ವಾಭಾವಿಕ. ಇಂದಿನ ಕೋಲಾಹಲ ಕಾಲದಲ್ಲಿ ಅವರು ಸಂಯಮ, ಸಮತೋಲನಗಳನ್ನು ಉಳಿಸಿಕೊಂಡು ಬಂದದ್ದು ನಾಡಿನ ಸಂಸ್ಕೃತಿಗೆ ಒಂದು ಅಪೂರ್ವ ಕೊಡುಗೆಯಾಗಿದೆ. "(ಮಾನ; ೧೯೯೨: ೫೪)

ಯಶವಂತ ಚಿತ್ತಾಲ

"ವೈಯಕ್ತಿಕವಾಗಿ ನನ್ನ ಖುಷಿಗೆ ಕಾರಣವಾದದ್ದು ಈ ಅಂಕಣ ಬರಹಗಳ ಸಾಹಿತ್ಯಿಕ ಗುಣ. ಈ ಗುಣದಿಂದಾಗಿಯೇ ಈ ಬರಹಕ್ಕೆ ತಾತ್ಕಾಲಿಕತೆಯನ್ನು ಮೀರಿ ಬಾಳುವ ಶಕ್ತಿ ಬಂದಿದೆ. ವಿಷಯ ವೈವಿಧ್ಯಕ್ಕೆ ಒಟ್ಟಂದ ತಂದ ಬದುಕಿನ ಸಮಗ್ರ ನೋಟ, ಭಾವನಾತ್ಮಕ ತಿಳಿವು ಹಾಗೂ ಕ್ರಿಯಾಶೀಲ ಭಾಷೆ, ಇವೆಲ್ಲ ಈ ಬರಹಕ್ಕೆ ಹೊಸತೇ ಒಂದು ಸಾಹಿತ್ಯಪ್ರಕಾರದ ಪ್ರಭೆ ತಂದಿವೆ". (ಮಾನ; ೧೯೯೨ : ೫೪).

ಎಚ್. ಎಸ್. ರಾಘವೇಂದ್ರರಾವ್

"ನಾಯಕರದೇ ಎನ್ನಬಹುದಾದ ವಿಶಿಷ್ಟತೆಯೆಂದರೆ ಪ್ರಸಂಗಗಳನ್ನು, ನಿಜಜೀವನದಲ್ಲಿ ನಡೆದ ಘಟನೆಗಳನ್ನು ಮತ್ತು ವೈಯಕ್ತಿಕ ಅನುಭವಗಳನ್ನು ತಮ್ಮ ಕಥನದ ರೂಪ ನಿರ್ಧಾರಕಗಳಾಗಿ ಅವರು ಬಳಸಿಕೊಳ್ಳುವ ರೀತಿ. "(ಮಾನ; ೧೯೯೨:೭೬).

ಡಾ. ಕೆ. ಶಿವರಾಮ ಕಾರಂತ

"ಹಾ.ಮಾ. ನಾಯಕರು ನಮ್ಮ ಜನತೆಗೆ ಪರಿಚಿತರಾಗುವುದು ಕನ್ನಡ ಸಾಹಿತ್ಯ ಲೋಕದ ತಾಪಮಾನವನ್ನು ಅಳೆಯುವ ಮಾನದಂಡವಾಗಿ.... ವಿಶಾಲ ಪರಿಶೀಲನೆಯಿಂದ, ಆಗಾಗ ತಿಳಿದು ಬಂದುದನ್ನು ನಿರ್ದಾಕ್ಷಿಣ್ಯವಾಗಿ ಹೇಳುತ್ತಾ ಬಂದವರು ಡಾ. ಹಾ.ಮಾ. ನಾಯಕರು. ಅವರ ತಾಳ್ಮೆಯೂ ವಿಶೇಷ; ಅವುಗಳ ಪ್ರಕಟನೆಯೂ ಧಾರಾಳ....! ಭಾರತೀಯ ಸಾಹಿತ್ಯ ಕ್ಷೇತ್ರದಲ್ಲಿ - ಕನ್ನಡದಲ್ಲಿ - ಏನಾಗಿದೆ, ಏನಾಗುತ್ತದೆ ಎಂದು ಹೇಳಬಲ್ಲವರು ಇರುವುದಾದರೆ ಅದು ಹಾ.ಮಾ. ನಾಯಕರು. ಅವರ 'ಹಾ' ಹಾರೋಹಳ್ಳಿಯಾಗಿ ಉಳಿಯದೆ , ಹಾರೋನಾಡಾಗಿದೆ 'ಮಾ' ನಿಜವಾಗಿಯೂ ಮಾನದಂಡದ ಸಾಹಸವಾಗಿದೆ" (ಮಾನ; ೧೯೯೨: ೧೭-೧೮).

ಡಾ. ಪು. ತಿ. ನರಸಿಂಹಾಚಾರ್

"ನಾಯಕರು ಬಹು ಶ್ರೇಷ್ಠ ಕನ್ನಡ ಗದ್ಯ ಲೇಖಕರು. ಅವರ ಬರವಣಿಗೆ ನೇರ, ಸರಳ, ವಸ್ತುನಿಷ್ಠ, ಔಚಿತ್ಯಪೂರ್ಣ, ಪ್ರಸಂಗೋಚಿತ. ಬಿಡದೆ ಓದಿಸಿಕೊಳ್ಳುವ ಸರಸತೆ ಅದರಲ್ಲಿದೆ. ಮೇಲುನೋಟಕ್ಕೆ ಸರಳವಾಗಿ ಕಂಡರೂ ಅದರ ತಳದಲ್ಲಿ ಅಭ್ಯಾಸ ಮತ್ತು ಚಿಂತನೆಗಳಡಗಿವೆ. ತಮಗೆ ನಿಜ ಎನ್ನಿಸಿದ್ದನ್ನು ಯಾವ ದಾಕ್ಷಿಣ್ಯಕ್ಕೂ ಒಳಗಾಗದೆ ನಿಷ್ಠುರವಾಗಿಯೂ ಹೇಳಬಲ್ಲವರು. ಆಡಳಿತದಲ್ಲೂ ತುಂಬಾ ದಕ್ಷರು. ಜೊತೆಗೆ ಸ್ನೇಹಪರರು, ಗುಣಪಕ್ಷಪಾತಿಗಳು." (ಮಾನ;೧೯೯೨: ೨೦).

ಡಾ. ದೇ.ಜವರೇಗೌಡ

"ಅವರು ನನಗಿಂತ ಮೇಧಾವಿಗಳು, ಪ್ರತಿಭಾವಂತರು, ಜಾಣರು, ಕುಶಲರು, ಕಾರ್ಯದಕ್ಷರು, ತರುಣರು, ಸಾಹಸಿಗಳು, ವಿದ್ವಾಂಸರು. ಕನ್ನಡ-ಭಾಷಾವಿಜ್ಞಾನಗಳೆರಡರಲ್ಲೂ ಅವರು ತಜ್ಞರು." (ಹಾ.ಮಾ. ನಾಯಕರನ್ನು ಕುರಿತು, ೧೯೯೧ : ೨೩)

ಡಾ. ಚಂದ್ರಶೇಖರ ಕಂಬಾರ

"ಸಾಹಿತ್ಯ ನಮ್ಮ ಸಾಂಸ್ಕೃತಿಕ ಬದುಕಿನ ಒಂದು ಭಾಗ. ಅದನ್ನು ಬಿಟ್ಟರೆ ಅದಕ್ಕೆ ಪ್ರತ್ಯೇಕ ಅಸ್ತಿತ್ವ ಇರಬಾರದು ಎನ್ನುವ ಒಂದು ವಿವೇಕ ಮತ್ತು ನಂಬಿಕೆ ಹಾ.ಮಾ.ನಾ. ರವರ ಬರಹಗಳ ಹಿನ್ನೆಲೆಗಿದೆ. ಅವರು ಬರೆದದ್ದನ್ನು ಬದುಕುತ್ತಾರೆ ಬದುಕಿದ್ದನ್ನು ಬರೆಯುತ್ತಾರೆ. ಆದ್ದರಿಂದ ಅವರ ವ್ಯಕ್ತಿತ್ವವೇ ನಮಗೊಂದು ದೊಡ್ಡ ಮೌಲ್ಯವಾಗುತ್ತದೆ." (ಮಾನ ; ೧೯೯೨ : ೧೧೬).

ರಾಷ್ಟ್ರಕವಿ ಕುವೆಂಪು

"ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಇಲಾಖೆಯನ್ನು ಉಜ್ವಲವಾಗಿ ಬೆಳೆಸಿದವರಲ್ಲಿ ಹಾ.ಮಾ. ನಾಯಕರೂ ಒಬ್ಬರು. ಅಷ್ಟೇ ಅಲ್ಲದೆ ಕನ್ನಡ ನಾಡು,

ನುಡಿ, ಜನ, ಸಾಹಿತ್ಯ, ಸಂಸ್ಕೃತಿ ಸಂಬಂಧವಾದ ಚಟುವಟಿಕೆಗಳಲ್ಲಿ ಶ್ರದ್ಧೆ ನಿಷ್ಠೆಗಳಿಂದ ಅವಿರತವಾಗಿ ತಮ್ಮನ್ನು ತೊಡಗಿಸಿಕೊಂಡು ಪ್ರಸಂಶನೀಯವಾದ ಮತ್ತು ಫಲಪ್ರದವಾದ ಕೆಲಸವನ್ನು ಮಾಡಿ ನಾಡಿನ ಜನರ ಪ್ರೀತ್ಯಾದರಗಳಿಗೆ ಪಾತ್ರರಾಗಿದ್ದಾರೆ. ನಾನು ಅಭಿಮಾನ ಪಡುವ ನನ್ನ ವಿದ್ಯಾರ್ಥಿಗಳಲ್ಲಿ ಅವರು ಒಬ್ಬರಾಗಿದ್ದಾರೆ." (ಸ್ವಂತ : ೧೧೯೨ ಬೆನ್ನುಡಿ).

ಎಸ್. ಎಂ. ಕೃಷ್ಣ

"ಕನ್ನಡ ಗದ್ಯ ಸಾಹಿತ್ಯಕ್ಕೆ ತಮ್ಮ ವಿಶಿಷ್ಟ ಶೈಲಿಯ ಮೆರಗು ನೀಡಿ, ಶ್ರೀಮಂತಗೊಳಿಸಿ, ಕನ್ನಡಕ್ಕಾಗಿ ಅಹರ್ನಿಶಿ ಶ್ರಮಿಸುತ್ತಿರುವ ಅಂಕಣಕಾರರಾಗಿಯೂ ಮಿಂಚಿದ, ಹಾ.ಮಾ.ನಾ. ಓರ್ವ ನಿಷ್ಠುರವಾದ ಬರಹಗಾರರು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ವಹಣಾ ಕಾರ್ಯವನ್ನು ಯಶಸ್ವಿಯಾಗಿ ನಿಭಾಯಿಸಿದ, ಈ ನೇರ ನಿಲುವಿನ ಮಂದಸ್ಮಿತದ ವ್ಯಕ್ತಿಯನ್ನು ಕುಲಪತಿಯಾಗಿ, ಪೂರ್ಣಾವಧಿ ಉಳಿಸಿಕೊಳ್ಳಲಾಗದೆ ಹೋದದ್ದು ಶೈಕ್ಷಣಿಕ ಕ್ಷೇತ್ರದ ದುರದೃಷ್ಟ." (ಸ್ವಂತ : ೧೯೯೨ : ಒಳರಕ್ಷಾ ಪುಟ).

ಚೆನ್ನವೀರ ಕಣವಿ

"ಕನ್ನಡ ಅಧ್ಯಯನ ಸಂಸ್ಥೆ, ರಾಜ್ಯ ಸಾಹಿತ್ಯ ಅಕಾಡೆಮಿ, ಕೇಂದ್ರಸಾಹಿತ್ಯ ಅಕಾಡೆಮಿ, ಸಾಹಿತ್ಯ ಪರಿಷತ್ತು ಎಲ್ಲಿದ್ದರೂ ತಮ್ಮ ದುಡಿಮೆ, ದಕ್ಷತೆ, ಕಾರ್ಯಕುಶಲತೆಗಳಿಂದ ಆ ಸಂಸ್ಥೆಗಳ ಮಹತ್ವವನ್ನು ಹೆಚ್ಚಿಸಿದ ಶ್ರೇಯಸ್ಸು ಹಾ.ಮಾ. ನಾಯಕರದಾಗಿದೆ. ಅಲ್ಲದೆ ಅವರೊಬ್ಬ ಅಪರೂಪದ ಲೇಖಕ, ವಾಗ್ಮಿ ಹಾಗೂ ನಾಡಿನ ಹಿತಚಿಂತಕರು." (ಸ್ವಂತ: ೧೯೯೨ : ಒಳ ರಕ್ಷಾಪುಟ).

೧.೫ : ವ್ಯಕ್ತಿತ್ವ :

ಹೊಸಗನ್ನಡ ಗದ್ಯಶೈಲಿಯ ಅತ್ಯುತ್ತಮ ರೂವಾರಿಗಳಲ್ಲಿ ಒಬ್ಬರಾದ ಹಾ.ಮಾ. ನಾಯಕ ಅವರು ತಮ್ಮ ವಿಶಿಷ್ಟ ಹಾಗೂ ಅನನ್ಯ ಶೈಲಿಯಿಂದ ನಾಡಿನಾದ್ಯಂತ ಚಿರಪರಿಚಿತರಾಗಿದ್ದಾರೆ. ಸಾಹಿತ್ಯ ನಮ್ಮ ಸಾಂಸ್ಕೃತಿಕ ಬದುಕಿನ ಒಂದು ಭಾಗ. ಅದನ್ನು ಬಿಟ್ಟರೆ ಅದಕ್ಕೆ ಪ್ರತ್ಯೇಕ ಅಸ್ತಿತ್ವ ಇರಬಾರದು ಎನ್ನುವ ವಿವೇಕ ಮತ್ತು ನಂಬಿಕೆ ಅವರ ಬರಹಗಳಿಗಿದೆ. ಅವರು ಯಾವುದರ ಬಗ್ಗೆ ಬರೆಯುವಾಗಲೂ, ತಮ್ಮ ಕಣ್ಣೆದುರು ನಡೆಯುತ್ತಿರುವುದನ್ನು, ನಡೆದುದನ್ನು ನಮ್ಮ ಕಣ್ಣೆದುರಿಗೆ ಕಾಣುವಂತೆ ಮಾಡುತ್ತಾರೆ. ಅದು ಯಾವುದೇ ವಿಷಯವಾಗಿರಬಹುದು. ಇನ್ನೊಂದು ವಿಶಿಷ್ಟ ಗುಣವೆಂದರೆ, ಪ್ರಸಂಗಗಳನ್ನು, ನಿಜಜೀವನದಲ್ಲಿ ನಡೆದ ಘಟನೆಗಳನ್ನು ಮತ್ತು ವೈಯಕ್ತಿಕ ಅನುಭವಗಳನ್ನು ತಮ್ಮ ಕಥನದ ರೂಪ ನಿರ್ಧಾರಕಗಳಾಗಿ ಅವರು ಬಳಸಿಕೊಳ್ಳುವ ರೀತಿ. ಕನ್ನಡ ಗದ್ಯವನ್ನು ಪತ್ರಿಕೋದ್ಯಮದ ತುರ್ತುಗಳಿಗೆ ಒಗ್ಗಿಸಿಕೊಳ್ಳುತ್ತಲೇ ಅವರ ಸಾಹಿತ್ಯದ ಅನನ್ಯತೆಯನ್ನು

ಉಳಿಸಿಕೊಳ್ಳುವ ಕೆಲಸದಲ್ಲಿ ಅವರ ಪಾತ್ರ ಖಂಡಿತವಾಗಿಯೂ ಇದೆ. ಯಾವುದೇ ಸಾಹಿತ್ಯ ಕೃತಿಗಿಂತ ಭಿನ್ನವಾದ ರೀತಿಯಲ್ಲಿ ಜನಮನದೊಳಗೆ ಇಳಿಯುವ ಈ ಬರವಣಿಗೆಯು, ಅವರ ತಿಳಿವಳಿಕೆಯ ಭಾಗವಾಗಿ, ತನ್ನ ತನವನ್ನು ಕಳೆದುಕೊಂಡು ಬಿಡುತ್ತದೆ.

ಅವರ ಸಾಹಿತ್ಯ ಮೀಮಾಂಸೆಯ ವಿಚಾರಗಳು ಅತ್ಯಂತ ವಿಸ್ತಾರವಾದದ್ದಾಗಿದೆ. ನಮ್ಮ ಸಾಹಿತ್ಯ ಪರಂಪರೆಯ ಬೆಳವಣಿಗೆಯ ಬಗೆಗೆ ಸ್ಪಷ್ಟವಾದ ಮೂಲಗ್ರಹಿಕೆ ಅವರಲ್ಲಿ ಅಂತಸ್ಥವಾಗಿದೆ. ನಮ್ಮ ಹೊಸ ಸಾಹಿತ್ಯದಲ್ಲಿ ಮಾಸ್ತಿಯವರು ಮಾಡಿದ ಹಾಗೆ ಹಾ.ಮಾ.ನಾಯಕರು ನಾಡ ಸಂಸ್ಕೃತಿಯ ನಿರ್ಮಾಣದಲ್ಲಿ ತೊಡಗಿದ್ದಾರೆ. ಅವರು ಯಾವುದೇ ತತ್ವ, ಬಣ, ಪಂಥ, ಪ್ರಣಾಲಿ, ವಾದ, ಬದ್ಧತೆ, ದರ್ಶನ ಇತ್ಯಾದಿ ವಿಚಾರಗಳಿಗೆ ಕಟ್ಟುಬೀಳದೆ ತಮ್ಮನ್ನು ಪೂರ್ಣವಾಗಿ ಎಲ್ಲ ಮೂಲಗಳಿಂದ ವಿಚಾರವನ್ನು ಉದಾತ್ತವಾದ ಅಂಶಗಳನ್ನು ಬರಮಾಡಿಕೊಂಡು ಸಾಹಿತ್ಯದ ಬೆಳವಣಿಗೆಯಲ್ಲಿ ತೊಡಗಿದ್ದಾರೆ. ಸಾಹಿತ್ಯದ ಮೂಲಕ ಸಾಂಸ್ಕೃತಿಕ ಜೀವನವನ್ನು ಉನ್ನಯನಗೊಳಿಸಬೇಕೆಂಬ ಆದರ್ಶದ ತುಡಿತ ಅವರ ಅಂತರಂಗದ ಮಿಡಿತವೂ ಆಗಿದೆ. ಹಾಗೆಯೇ ಅವರ ವಿಷಯ ಪ್ರತಿಪಾದನೆಯ ರೀತಿ, ಸ್ಪಷ್ಟವಾದ ಆಲೋಚನಾ ವಿಧಾನ, ನೇರವೂ ಹೃದಯಸ್ಪರ್ಶಿಯೂ, ಸ್ಫಟಿಕದ ಹರಳಿನಂತೆ ಕಾಂತಿಯುತ ಭಾವ- ವಿಚಾರಗಳು ಸಮನ್ವಯಗೊಂಡ ಭಾಷೆ ಮುಖ್ಯವಾದುದು. ಅವರಲ್ಲಿ ಜ್ಞಾನದ ಬೆಳಕು, ಹಾಗೂ ಹೃದಯದ ಮಾಧುರ್ಯ ಸಂಗಮಿಸಿದೆ.

ಡಾ.ಹಾ.ಮಾ.ನಾಯಕರು ವಿಮರ್ಶಾಧೋರಣೆಯಲ್ಲಿ ಬದುಕು ಮತ್ತು ಸಾಹಿತ್ಯ ಆರೋಗ್ಯಕರ ಧೋರಣೆಯನ್ನು ಹೊಂದಿರಬೇಕೆಂಬ ಮನೋಭಾವದವರು. ಕೃತಿ ವಿಶ್ಲೇಷಣೆಯಲ್ಲಿ ಸಮನ್ವಯ ಹಾಗೂ ಸಹೃದಯ ಮಾರ್ಗ, ಸಂಕ್ಷಿಪ್ತತೆ ಮತ್ತು ಖಚಿತತೆಯನ್ನು ಕಾಣಬಹುದು. ಸಾಹಿತ್ಯ ಮೌಲ್ಯಮಾಪನದಲ್ಲಿ ಭೂತ ಭವಿಷ್ಯತ್ತುಗಳಿಗೂ ಅನ್ವಯಿಸುವ ಸೂತ್ರಗಳ ಅನ್ವೇಷಣೆಯ ಪೂರ್ಣದೃಷ್ಟಿ ಇದೆ. ಹಾಗೆಯೇ ವಿಮರ್ಶೆಯನ್ನು ಕುರಿತು ನಾಯಕರಿಗೆ ಅಪಾರ ಗೌರವವಿದೆ. ಸಾಹಿತ್ಯದ ಮುನ್ನಡೆಯಲ್ಲಿ ವಿಮರ್ಶೆಯ ಪಾತ್ರವೂ ಅತಿಮುಖ್ಯ ಎಂಬುದು ನಾಯಕರ ನಂಬಿಕೆ. ವಿಮರ್ಶೆಯ ಸ್ವರೂಪ, ವೈಖರಿ, ವಿಮರ್ಶಕನ ಅರ್ಹತೆ ಕರ್ತವ್ಯಗಳು ಅಷ್ಟೇ ಮುಖ್ಯ. ವಿಮರ್ಶಕನ ಜವಾಬ್ದಾರಿ ಸಾಹಿತಿಗಿಂತಲೂ ಒಂದು ಹೆಜ್ಜೆ ಹೆಚ್ಚಿನದು ಎಂಬುದು ಅವರ ಅಭಿಪ್ರಾಯ. "ವಿಮರ್ಶೆ ಸಾಹಿತ್ಯವನ್ನು ಸರಿಯಾದ ಹಾದಿಯಲ್ಲಿ ನಡೆಸಬಲ್ಲ ತೋರುಗಂಬ. ಒಬ್ಬ ಲೇಖಕ ತನ್ನ ಶಕ್ತಿಯ ಅರಿವನ್ನು ಅರಿತುಕೊಂಡು ನಡೆಯಬೇಕಾದ ಮಾರ್ಗವನ್ನು ವಿಮರ್ಶೆ ತೋರುತ್ತದೆ. ಯಾವುದೇ ಕಾರ್ಯದಲ್ಲೇ ಆಗಲಿ, ಯಾವುದೊಂದು ವಿಚಾರದಲ್ಲೇ ಆಗಲಿ, ವಿಮರ್ಶೆ ಅವುಗಳ ಮುನ್ನಡೆಗೆ ಕೈದೀವಿಗೆ ಇದ್ದಹಾಗೆ. ಆದರೆ ಸಾಹಿತ್ಯದಲ್ಲಿ ಇದರ ಸ್ಥಾನ ಇನ್ನೂ ಮಿಗಿಲಾದುದು, ಹಿರಿದಾದುದು. ಮೇಲಾಗಿ ವಿಮರ್ಶೆ ಸಾಹಿತ್ಯದ ಒಂದು ಪ್ರಮುಖ ಅಂಗವಾಗಿಯೇ ಇದ್ದುಕೊಂಡು ಸಾಹಿತ್ಯ ರಥವನ್ನು ನಡೆಸುವ ಸಾರಥಿಯಾಗಿದೆ. ಸಾಹಿತ್ಯ

ನಡೆದ ಜಾಡಿನಲ್ಲೇ ನಡೆದು ಅದು ಇರುವ, ಇರಬೇಕಾದ ಪರಿಸ್ಥಿತಿಯನ್ನು ಪ್ರಾಮುಖ್ಯತೆಯನ್ನು ಸಹೃದಯತೆಯಿಂದ ವಿವರಿಸುವ ಕೆಲಸ ವಿಮರ್ಶೆಯದು. ಮುಖ್ಯವಾದುದೆಷ್ಟೋ ಅಷ್ಟೇ ಜವಾಬ್ದಾರಿಯುತವಾದುದು, ಹೊಣೆಗಾರಿಕೆಯದು. ವಿಮರ್ಶೆಯ ಸಹಹೃದಯತೆಯ ಪಾಲನ್ನು ಒತ್ತಿ ಹೇಳುತ್ತಾರೆ. ಹಾಗೆಯೇ ಪೂರ್ಣದೃಷ್ಟಿಯನ್ನೂ ಸಹ ಹೇಳುತ್ತಾರೆ.

ಹಾ.ಮಾ. ನಾಯಕರು ಸ್ವಾಭಾವಿಕವಾಗಿ ಗುಣಗ್ರಾಹಿ. ಯೋಗ್ಯತೆ ಇರುವವರನ್ನು ಜನರು ಇದುವರೆಗೆ ಗುರುತಿಸದಿದ್ದರೂ- ತಾವೇ ಗುರುತಿಸುತ್ತಾರೆ. ತಮ್ಮ ನಿಲುವು ಖಚಿತವಾದರೂ, ಇತರರ ತಪ್ಪುಗಳನ್ನು ತೋರಿಸುವುದರಲ್ಲಿ ವಿನಯವನ್ನು, ತಾಳ್ಮೆಯನ್ನು ಅನುಸರಿಸುತ್ತಾರೆ. ಅವರು ಪ್ರತಿಭೆ ಇರುವವರನ್ನು ಗುರುತಿಸುತ್ತಾರೆ. ಅವರಿಗೆ ಅನುಕೂಲವನ್ನು ಸಹ ಒದಗಿಸುತ್ತಾರೆ. ಹಾಗೆಯೇ ಹಾ.ಮಾ. ನಾಯಕರವರು ಪ್ರತಿಭೆಯ ಸ್ವರೂಪವನ್ನು ಹಲವಾರು ಸಂದರ್ಭಗಳಲ್ಲಿ ಚರ್ಚಿಸುತ್ತಾರೆ. ಸಾಹಿತ್ಯ ನಿರ್ಮಿತಿಗೆ ಲೇಖಕನಿಗೆ 'ಪ್ರತಿಭೆ' ವರವಾಗಿದ್ದರೂ ಅದರ ಹಿಂದೆ ನಡೆಯುವ ಇತರ ಪರಿಣಾಮಗಳನ್ನು ಅವರು ಕಂಡುಕೊಂಡಿದ್ದಾರೆ. " ಪ್ರತಿಭೆ ಇರುವಲ್ಲಿ ಅಹಂಕಾರ ಸಹಜ. ಈ ಅಹಂಕಾರ ಅನೇಕರಲ್ಲಿ ಸುಪ್ತವಾಗಿರುತ್ತದೆ. ಕೆಲವರಲ್ಲಿ ಆಗಾಗ ವ್ಯಕ್ತವಾಗುತ್ತದೆ." (ಸಮೂಹ :೧೩೧ : ೧೯೮೨) ಎಂದು ಹೇಳಿದ್ದಾರೆ. ಹಾ.ಮಾ. ನಾಯಕರು ಪ್ರತಿಭೆಯನ್ನು ಗುರುತಿಸುವ ಜವಾಬ್ದಾರಿಯೂ ಸಂಬಂಧ ಪಟ್ಟವರದ್ದಾಗಿರುತ್ತದೆ ಎಂದು ಹೇಳಲು ಮರೆಯುವುದಿಲ್ಲ. " ನಿಜವಾದ ಪ್ರತಿಭೆಯನ್ನು ಬೆಳೆಸಿ ಉಳಿಸುವ ಸಾಮರ್ಥ್ಯವಿಲ್ಲದ ಜನರಿಗೆ ಪ್ರತಿಭೆಯ ಬಗೆಗೆ ಮಾತನಾಡಲು ಯಾವ ಅಧಿಕಾರವೂ ಇಲ್ಲ" (ಸಮೂಹ :೧೩೪ : ೧೯೮೨) ಎಂದು ಸಾರಿದ್ದಾರೆ. ಸಮಕಾಲೀನ ಸಾಹಿತ್ಯದಲ್ಲಿ ಪುರುಷಪ್ರತಿಭೆ ಮಹಿಳಾಪ್ರತಿಭೆ ಎಂದು ಪ್ರತ್ಯೇಕವಾಗಿ ವಿಭಜಿಸುವುದನ್ನು ಅವರು ವಿರೋಧಿಸುತ್ತಾರೆ. "ಲೇಖಕರು ನಿಜವಾದ ಪ್ರತಿಭಾವಂತರಾಗಿದ್ದರೆ ಲಿಂಗವ್ಯತ್ಯಾಸದಿಂದಲೇ ಅವರ ಸಾಹಿತ್ಯ ವ್ಯತ್ಯಾಸವಾಗುವುದಿಲ್ಲ" (ಸಂಪ್ರತಿ: ೨೭೧ :೧೯೮೮) ಎಂದು ಹೇಳಿ ಪ್ರತಿಭಾವ್ಯಾಪಾರ ನಿಸರ್ಗ ಸಹಜವಾದುದೆಂದು ವಿದಿತಪಡಿಸುತ್ತಾರೆ.

ಮೂಲತಃ ಹಾ.ಮಾ.ನಾಯಕರು ಪುಸ್ತಕ ಪ್ರಿಯರು. ತಮ್ಮ ಅಂಕಣದಲ್ಲಿ ಆಗಿಂದಾಗ ಪುಸ್ತಕಗಳ ಬಗ್ಗೆ ಒಟ್ಟಾಗಿ ಮತ್ತು ಪ್ರತ್ಯೇಕವಾಗಿ ಬರೆಯುತ್ತಾರೆ. ಫ್ರಾಂಕ್‌ಫರ್ಟಿನ ಪುಸ್ತಕ ಮೇಳವನ್ನು ವರ್ಣಿಸುವಾಗ ಕನ್ನಡನಾಡಿನ ಪುಸ್ತಕಗಳ ದಯನೀಯ ಸ್ಥಿತಿಗತಿಗಳನ್ನು ವಿಮರ್ಶಿಸುತ್ತಾರೆ. ಜೊತೆಗೆ ಎಲ್ಲಾದರೂ ಒಂದು ಒಳ್ಳೆಯ ಪ್ರಯತ್ನ ಮಿಂಚಿದರೂ ಸಾಕು, ಅದನ್ನು ಪ್ರೋತ್ಸಾಹಿಸುತ್ತಾರೆ.

ನಾಯಕರಲ್ಲಿ ಎದ್ದುಕಾಣುವ ಗುಣ, ಕನ್ನಡದ ದೀಕ್ಷೆ ಎಚ್ಚರವಾಗಿರುವ ಪ್ರತಿ ಗಳಿಗೆಯಲ್ಲೂ ಅವರ ಮನಸ್ಸು, ಬುದ್ಧಿ ಕನ್ನಡವನ್ನು ಜಪಿಸುತ್ತಿರುತ್ತದೆ. ಆದರೆ ಅವರು ಯಾವ ಭಾಷೆಗೂ ವಿರೋಧಿಗಳಲ್ಲ, ಇಂಗ್ಲೀಷಿಗೂ ವಿರೋಧಿಗಳಲ್ಲ , ಸಂಸ್ಕೃತದ

ದ್ವೇಷಿಗಳೂ ಅಲ್ಲ. ಕನ್ನಡಕ್ಕೆ ಯಾವ ಕಡೆಯಿಂದ ಅಪಾಯ ಬಂದರೂ ಅದು ಯಾವುದೇ ವೇಷವನ್ನು ಧರಿಸಿ ಬಂದರೂ, ನಾಯಕರ ಸಂವೇದನೆ ತೀವ್ರವಾಗಿ ಎಚ್ಚರಗೊಂಡು ಅವರು ಅದನ್ನು ಪ್ರತಿಭಟಿಸುತ್ತಾರೆ. ನಮ್ಮ ಇಂದಿನ ಕನ್ನಡ ಭಾಷೆಯ ಈ ಪರಿಸ್ಥಿತಿಯಲ್ಲಿ ಯಾವ ಭಾಷೆಯೂ ಕನ್ನಡದೊಂದಿಗೆ ಪೈಪೋಟಿ ಮಾಡಬಾರದು ಎಂಬುದು ಅವರ ಖಚಿತ ನಿಲುವು. ಜನಜೀವನದಲ್ಲಿ, ಶಿಕ್ಷಣದಲ್ಲಿ, ಆಡಳಿತದಲ್ಲಿ ಕನ್ನಡ ಭಾಷೆಯ ಸ್ಥಾನಮಾನ ಹೇಗಿರಬೇಕು ಎಂಬ ಬಗ್ಗೆ ಹಾ.ಮಾ. ನಾಯಕರು ಸ್ಪಷ್ಟವಾಗಿ ಪ್ರತಿಪಾದಿಸಿದವರು. ಅದನ್ನು ತಮ್ಮ ಬದುಕಿನಲ್ಲಿ ನಿಷ್ಠೆಯಿಂದ ಅನುಷ್ಠಾನಕ್ಕೆ ತಂದವರು. ತಮ್ಮ ಮಕ್ಕಳಿಗೆ ಕನ್ನಡ ಮಾಧ್ಯಮದಲ್ಲಿಯೇ ಶಿಕ್ಷಣ ಕೊಡಿಸಿದವರು. ಅವರು ೧೯೮೫ರಲ್ಲಿ ಬೀದರಿನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ತಮ್ಮ ಅಧ್ಯಕ್ಷ ಭಾಷಣದಲ್ಲಿ ಹೇಳಿದ ಮಾತುಗಳು, ಕೇಳಿದ ಈ ಪ್ರಶ್ನೆಗಳು ಕನ್ನಡ ಭಾಷೆ, ಸಾಹಿತ್ಯದ ಉಳಿವು, ಬೆಳವಣಿಗೆಯ ಬಗ್ಗೆ ಆಸಕ್ತಿ ಕಾಳಜಿ ಇರುವವರೆಲ್ಲ ಪ್ರಾಮಾಣಿಕವಾಗಿ ಕೇಳಿಕೊಂಡು ಉತ್ತರ ಪಡೆಬೇಕಾದಂಥವು. "ಕನ್ನಡ ಕನ್ನಡ ಎನ್ನುವ ನಾವು ನಮ್ಮನ್ನೇ ಪ್ರಶ್ನಿಸಿಕೊಳ್ಳುವುದು ತೀರ ಅಗತ್ಯ. ಕನ್ನಡ ಎಂದು ಎಷ್ಟು ಜನ ತಿಳಿದಿದ್ದೇವೆ? ನಮ್ಮ ಮಕ್ಕಳನ್ನು ಯಾವ ಶಾಲೆಗಳಲ್ಲಿ ಓದಿಸುತ್ತಿದ್ದೇವೆ? ನಾವು ಯಾವ ಪತ್ರಿಕೆಗಳನ್ನು ಓದುತ್ತಿದ್ದೇವೆ? ನಾವು ನೋಡುವುದು ಯಾವ ಸಿನಿಮಾಗಳನ್ನು? ನಮ್ಮ ಮನೆಯ ಬೋರ್ಡು ಯಾವುದು ಯಾವ ಭಾಷೆಯಲ್ಲಿದೆ? ನಮ್ಮ ಲೆಟರ್ ಹೆಡ್‌ಗಳು ಅಚ್ಚಾಗಿರುವುದು, ನಮ್ಮ ಮನೆಯ ಲಗ್ನಪತ್ರಿಕೆಗಳು ಅಚ್ಚಾಗಿರುವುದು ಯಾವ ಭಾಷೆಯಲ್ಲಿ? ನಾವು ಬ್ಯಾಂಕುಗಳಿಗೆ ಚೆಕ್‌ಬರೆಯುವುದು ಕನ್ನಡದಲ್ಲೆ? ನಾವು ಬರೆಯುವ ಕಾಗದ ಪತ್ರಗಳಲ್ಲಿ ಎಷ್ಟು ಭಾಗ ಕನ್ನಡ? ಇಂಥ ನೂರಾರು ಪ್ರಶ್ನೆಗಳನ್ನು ನಾವು ಕೇಳಿಕೊಳ್ಳಬೇಕು. ಅವುಗಳ ಉತ್ತರ ನಮ್ಮನ್ನು ಚುಚ್ಚಿದರೆ ಮಾತ್ರ ನಾವು ಕನ್ನಡವನ್ನು ಕುರಿತು ಮಾತಾಡಲು ಯೋಗ್ಯತೆ ಗಳಿಸಿಕೊಂಡಿದ್ದೇವೆ ಎಂದು ಅರ್ಥ. ಕನ್ನಡ, ಕನ್ನಡಿಗರು, ಮೊದಲು ಕನ್ನಡದವರಾಗಬೇಕು... ನಮ್ಮೆಲ್ಲರ ಮೊದಲನೆಯ ಹಾಗೂ ಕೊನೆಯ ಕೆಲಸ ಈಗ ಕನ್ನಡವನ್ನು ಉಳಿಸಬೇಕಾದುದೇ ಆಗಿದೆ."

ಡಾ.ಹಾ.ಮಾ.ನಾಯಕರು ಅಧ್ಯಾಪಕ ವೃತ್ತಿಗೆ ಸೇರಿದವರಾಗಿದ್ದರೂ ಅವರು ತಮ್ಮ ಸೇವಾ ಅವಧಿಯ ಹೆಚ್ಚಿನಕಾಲ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದರು. ಅವರು ಶೀಲ, ಶಿಸ್ತು, ದುಡಿಮೆ, ದಕ್ಷತೆ, ನ್ಯಾಯನಿಷ್ಠುರತೆಗಳಿಂದ ಆಡಳಿತವನ್ನು ನಡೆಸಿಕೊಂಡು ಬಂದವರು. ನಮ್ಮ ಇಂದಿನ ಸಾಮಾಜಿಕ, ಸಾಂಸ್ಕೃತಿಕ ಸಂದರ್ಭದಲ್ಲಿ ವ್ಯವಸ್ಥೆ, ಆಡಳಿತಗಳು ಹೇರುವ ಒತ್ತಡ, ಅಡೆತಡೆಗಳ ನಡುವೆಯೂ ಶೈಕ್ಷಣಿಕ ಪರಿಸರದಲ್ಲಿ ಮುನ್ನೋಟವಿರುವ ಒಬ್ಬ ಸಮರ್ಥ ಆಡಳಿತಗಾರ ಹೇಗಿರಬಹುದು ಎಂಬುದಕ್ಕೆ ಡಾ.ಹಾ.ಮಾ. ನಾಯಕರು ಮಾದರಿ. ತಮ್ಮ ನಡವಳಿಕೆ, ವ್ಯವಹಾರಗಳ ಮೂಲಕವೇ ಸಮರ್ಥ ಆಡಳಿತದ ಮತ್ತು ಶ್ರೇಷ್ಠ ಮಟ್ಟದ ಶಿಸ್ತಿನ ಪರಿಕಲ್ಪನೆಯನ್ನು ಸ್ಪಷ್ಟಪಡಿಸಿಕೊಂಡವರು ಅವರು.

೧.೫: ಅನುಬಂಧಗಳು

೧.೫.೧: ಪೂ ಚಂ ತೇ: ಕೆಲವು ಮುಖ್ಯ ವರ್ಷಗಳು

೧೯೩೮

ಜನನ: ಸೆಪ್ಟಂಬರ್ ೧೨ (ಸರ್ಕಾರಿ ದಾಖಲೆಗಳಂತೆ ಫೆಬ್ರವರಿ, ೫): ನಾಲೂರು-ಹೊಸಮನೆ, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ತಂದೆ: ಹಾರೋಗದ್ದೆ ಶ್ರೀನಿವಾಸ ನಾಯಕ

ತಾಯಿ: ಎನ್.ಡಿ. ರುಕ್ಮಿಣಿಯಮ್ಮ

೧೯೪೭

ಲೋಯರ್ ಸೆಕೆಂಡರಿ (ಮೇಗರವಳ್ಳಿ ಮತ್ತು ತೀರ್ಥಹಳ್ಳಿ ಮಾಧ್ಯಮಿಕ ಶಾಲೆಗಳು)

೧೯೫೦

ಎಸ್.ಎಸ್.ಎಲ್.ಸಿ. (ತೀರ್ಥಹಳ್ಳಿ ಪ್ರೌಢಶಾಲೆ)

ಮೊದಲನೆಯ ಪುಸ್ತಕ 'ಬಾಳ್ನೋಟಗಳು' ಪ್ರಕಟಣೆ

೧೯೫೨

ಇಂಟರ್ ಮೀಡಿಯೆಟ್ (ಪ್ರಥಮ ದರ್ಜೆ ಕಾಲೇಜು, ಶಿವಮೊಗ್ಗ)

೧೯೫೪

ಹೊನ್ನಶೆಟ್ಟಿ ಬಹುಮಾನ (ಮೈಸೂರು ವಿಶ್ವವಿದ್ಯಾನಿಲಯ)

೧೯೫೫

ಬಿ.ಎ. ಆನರ್ಸ್ ಪದವಿ (ಮೈಸೂರು ವಿಶ್ವವಿದ್ಯಾನಿಲಯ)

ಮೇ, ೧೦: ಬಿ.ಎಸ್. ಯಶೋಧರಮ್ಮ ಅವರೊಡನೆ ಮದುವೆ

ಜುಲೈ, ೮: ತುಮಕೂರಿನ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿಯ ಆರಂಭ

೧೯೫೬

ಜುಲೈ, ೧೭: ಮಗಳು ಕವಿತಾ ಜನನ

ಎಂ.ಎ. ಅಧ್ಯಯನಕ್ಕಾಗಿ ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿವೇತನ

೧೯೫೭

ಡೆಹರಾಡೂನಿನಲ್ಲಿ ಭಾಷಾಶಾಸ್ತ್ರದ ಬೇಸಿಗೆ ಶಾಲೆಯಲ್ಲಿ ಭಾಗವಹಿಸಿದ್ದು

೧೯೫೮

ಎಂ.ಎ. ಪದವಿ (ಕಲ್ಕತ್ತ ವಿಶ್ವವಿದ್ಯಾನಿಲಯ)

ಶಿವಮೊಗ್ಗ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಧ್ಯಾಪಕ

ಕಲ್ಕತ್ತ ವಿಶ್ವವಿದ್ಯಾನಿಲಯದ ಚಿನ್ನದ ಪದಕ - ಬಹುಮಾನ

೧೯೫೯

ಸೆಪ್ಟಂಬರ್, ೯: ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಭಾಷಾಶಾಸ್ತ್ರದ ರೀಡರ್

ಸೆಪ್ಟಂಬರ್, ೧೮: ಮಗ ರವೀಂದ್ರ ಜನನ

ಕೊಯಮತ್ತೂರಿನಲ್ಲಿ ಭಾಷಾಶಾಸ್ತ್ರದ ಬೇಸಿಗೆ ಶಾಲೆಯಲ್ಲಿ ಭಾಗವಹಿಸಿದ್ದು

೧೯೬೧

ಮಾನಸಗಂಗೋತ್ರಿ ಸ್ನಾತಕೋತ್ತರ ಕನ್ನಡ ವಿಭಾಗಕ್ಕೆ ವರ್ಗ

೧೯೬೨

ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಸರ್ಕಾರದ ಗೃಹ ಖಾತೆಯ ವಿದ್ಯಾರ್ಥಿವೇತನ

ಫುಲ್‌ಬ್ರೈಟ್ ಪ್ರವಾಸ ವೇತನ, ಇಂಡಿಯಾನಾ ವಿಶ್ವವಿದ್ಯಾನಿಲಯಕ್ಕೆ ಪ್ರವೇಶ

೧೯೬೩

ಇಂಡಿಯಾನಾ ವಿಶ್ವವಿದ್ಯಾನಿಲಯದ ಮೆಷೀನ್ ಟ್ರಾನ್ಸ್‌ಲೇಷನ್ ವಿಭಾಗದಲ್ಲಿ ಸಂಶೋಧನ ಸಹಾಯಕ

೧೯೬೪

ಪಿಎಚ್.ಡಿ. ಪದವಿ (ಇಂಡಿಯಾನಾ ವಿಶ್ವವಿದ್ಯಾನಿಲಯ)

ಬ್ಲೂಮಿಂಗ್‌ಟನ್ನಿನಲ್ಲಿ ಭಾಷಾವಿಜ್ಞಾನದ ಬೇಸಿಗೆ ಶಾಲೆಯಲ್ಲಿ ಭಾಗವಹಿಸಿದ್ದು

೧೯೬೫

ಫೆಬ್ರವರಿ, ೧೯: ಮಾನಸ ಗಂಗೋತ್ರಿಯಲ್ಲಿ ಭಾಷಾಶಾಸ್ತ್ರದ ರೀಡರ್

೧೯೬೬

ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯಲ್ಲಿ ಭಾಷಾಶಾಸ್ತ್ರದ ಒಪ್ಪೊತ್ತಿನ ಉಪನ್ಯಾಸಕ

೧೯೬೭

ರುಮಾನಿಯಾದ ಬುಖಾರೆಸ್ಟಿನಲ್ಲಿ ನಡೆದ ಹತ್ತನೆಯ ಅಂತರ್‍ರಾಷ್ಟ್ರೀಯ ಭಾಷಾವಿಜ್ಞಾನಿಗಳ ಸಮ್ಮೇಳನದಲ್ಲಿ ಭಾರತದ ಒಬ್ಬ ಪ್ರತಿನಿಧಿ

೧೯೬೮

ಜುಲೈ, ೧: ಕನ್ನಡ ಪ್ರಾಧ್ಯಾಪಕ

ಡಿಸೆಂಬರ್, ೪: ಕನ್ನಡ ಪ್ರಾಧ್ಯಾಪಕ ಹುದ್ದೆಯೊಂದಿಗೆ ಭಾಷಾಶಾಸ್ತ್ರ ಪ್ರಾಧ್ಯಾಪಕರಾಗಿಯೂ ಪರಿಗಣಿತ

೧೯೬೯

ನವಂಬರ್, ೧: ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ

ಕನ್ನಡ ವಿಶ್ವಕೋಶದ ಪ್ರಧಾನ ಸಂಪಾದಕ

ಅಖಿಲ ಕರ್ನಾಟಕ ಎರಡನೇ ಜಾನಪದ ಸಮ್ಮೇಳನದ ವಿಚಾರಗೋಷ್ಠಿ ಅಧ್ಯಕ್ಷ (ಮಂಗಳೂರು)

೧೯೭೦

ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯ (೯ ವರ್ಷ)

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರೀ ಸಮಿತಿ ಸದಸ್ಯ (೧೬ ವರ್ಷ)

ನರಸಿಂಹರಾಜಪುರದಲ್ಲಿ ಸಾರ್ವಜನಿಕ ಸನ್ಮಾನ

೧೯೭೧

ಮೈಸೂರು ವಿಶ್ವವಿದ್ಯಾನಿಲಯದ ಕಲಾ ಮಂಡಲದ ಡೀನ್

ಬೆಳಗಾವಿ ಜಿಲ್ಲಾ ಮೊದಲನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ

೧೯೭೨

ಕಾಸರಗೋಡು ಕನ್ನಡಿಗರ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ

೧೯೭೩

ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿ ಸದಸ್ಯ (೧೫ ವರ್ಷ)

ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷ

ನಿಡುಮಾಮಿಡಿ ಜಗದ್ಗುರುಗಳಿಂದ 'ಹೊಂಗನ್ನಡಿಗ' ಪ್ರಶಸ್ತಿ ಮತ್ತು ಚಿನ್ನದ ಪದಕ

೧೯೭೪

ಪೆನ್ಸಿಲ್‌ವೇನಿಯಾ ವಿಶ್ವವಿದ್ಯಾನಿಲಯದ ಸೆಂಟರ್ ಆಫ್ ಸೌತ್ ಏಷಿಯನ್ ಸ್ಟಡೀಸ್‌ನಲ್ಲಿ ಗೌರವ ಸಂದರ್ಶನ ವಿದ್ವಾಂಸ

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಿರಿಯ ಪ್ರಾಧ್ಯಾಪಕ

ಕರ್ನಾಟಕ ರಾಜ್ಯ ಪದವಿಪೂರ್ವ ಶಿಕ್ಷಣ ಮಂಡಳಿ ಸದಸ್ಯ (೩ ವರ್ಷ)

೪೮ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ (ಮಂಡ್ಯ) ಜಾನಪದ ಗೋಷ್ಠಿಯ ಅಧ್ಯಕ್ಷ

೧೯೭೫

ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿಗೆ ಆಯ್ಕೆ

೧೯೭೬

ಅಖಿಲ ಭಾರತ ಶರಚ್ಚಂದ್ರ ಶತಮಾನೋತ್ಸವ ಸಮಿತಿ ಸದಸ್ಯ

ಕಲ್ಕತ್ತೆಯ ಜಾನಪದ ಅಕಾಡೆಮಿಯ, ಜಾನಪದ ಅಧ್ಯಯನ ಕಾಲೇಜಿನ ಸಲಹಾ ಸಮಿತಿ ಸದಸ್ಯ

೧೯೭೭

ಭಾರತೀಯ ಜ್ಞಾನಪೀಠ ಕನ್ನಡ ಸಲಹಾ ಸಮಿತಿಯ ಸದಸ್ಯ- ಸಂಚಾಲಕ

ಬೆಂಗಳೂರು ವಿಶ್ವವಿದ್ಯಾನಿಲಯದ ಕಲಾಮಂಡಲದ ಸದಸ್ಯ

ಕರ್ನಾಟಕ ವಿಶ್ವವಿದ್ಯಾಲಯದ ಕಲಾಮಂಡಲದ ಸದಸ್ಯ

೧೯೭೮

ಕೇಂದ್ರ ಸಾಹಿತ್ಯ ಅಕಾಡೆಮಿ ಜನರಲ್ ಕೌನ್ಸಿಲ್ ಸದಸ್ಯ (೧೦ ವರ್ಷ)

ಕೇಂದ್ರ ಸಾಹಿತ್ಯ ಅಕಾಡೆಮಿ ಕಾರ್ಯಕಾರೀ ಸಮಿತಿ ಸದಸ್ಯ (೧೦ ವರ್ಷ)

ವಿ ವಿ ಧನಸಹಾಯ ಆಯೋಗದ ಭಾಷಾಶಾಸ್ತ್ರ ಸಲಹಾ ಸಮಿತಿ ಸದಸ್ಯ

ನ್ಯಾಷನಲ್ ಬುಕ್ ಟ್ರಸ್ಟ್‌ನ ಕನ್ನಡ ಸಲಹಾ ಸಮಿತಿ ಸದಸ್ಯ (೮ ವರ್ಷ)

ನ್ಯಾಷನಲ್ ಬುಕ್ ಟ್ರಸ್ಟ್‌ನ ಟ್ರಸ್ಟಿ (೪ ವರ್ಷ)

ಲಿಯೋ ಟಾಲ್ ಸ್ಟಾಯ್ ಅವರ ನೂರೈವತ್ತನೆಯ ಜನ್ಮದಿನ ಸಮಾರಂಭಗಳ ರಾಷ್ಟ್ರೀಯ ಹಾಗೂ ರಾಜ್ಯ ಸಮಿತಿಗಳ ಸದಸ್ಯ

ಮಾನವಶಾಸ್ತ್ರಗಳ ಹತ್ತನೇ ಅಂತರರಾಷ್ಟ್ರೀಯ ಸಮ್ಮೇಳನದ ಅಂಗವಾದ ಜನಪದ ಸಾಹಿತ್ಯ ಗೋಷ್ಠಿಯ ಅಧ್ಯಕ್ಷ (ಕಲ್ಕತ್ತಾ)

ಕರ್ನಾಟಕ ವಿಶ್ವವಿದ್ಯಾಲಯದ ಸಂದರ್ಶನ ಪ್ರಾಧ್ಯಾಪಕರಾಗಿ ಆಹ್ವಾನ

ಮಧುರೈ ಕಾಮರಾಜ್ ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಕೌನ್ಸಿಲ್ ಸದಸ್ಯ

ಅಖಿಲ ಕರ್ನಾಟಕ ಪ್ರಗತಿಪಂಥದ ಮೂರನೆಯ ಸಮ್ಮೇಳನದ ಅಧ್ಯಕ್ಷ (ಮಹಾಲಿಂಗಪುರ)

೫೦ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ (ನವದೆಹಲಿ) ಸಾಹಿತ್ಯ ಗೋಷ್ಠಿಯ ಅಧ್ಯಕ್ಷ

೧೯೭೯

ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಅಧ್ಯಕ್ಷ (೫ ವರ್ಷ)

ಹಿರಿಯೂರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷ

೧೯೮೦

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸದಸ್ಯ (೧೨ ವರ್ಷ)

ಸೋವಿಯೆತ್ ರಷ್ಯಾಕ್ಕೆ ಭೇಟಿ

'ಸಲ್ಲಾಪ'ಕ್ಕೆ ೧೯೭೫ರ ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವ ಪ್ರಶಸ್ತಿ

ಕನ್ನಡ ಪಂಡಿತ ಪರೀಕ್ಷೆಗಳ ಪಠ್ಯಕ್ರಮ ಪರಿಷ್ಕಾರ ಸಮಿತಿ ಅಧ್ಯಕ್ಷ

ಚಿಕ್ಕಮಗಳೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸನ್ಮಾನ

೧೯೮೧

ವಿಶ್ವ ಕನ್ನಡ ಸಮ್ಮೇಳನ ಸಮಿತಿ ಸದಸ್ಯ

ಕರ್ನಾಟಕ ಜಾನಪದ - ಯಕ್ಷಗಾನ ಅಕಾಡೆಮಿ ಸದಸ್ಯ (೩ ವರ್ಷ)

೧೯೮೨

ಬ್ರಿಟಿಷ್ ಮ್ಯೂಜಿಯಂ ಆಹ್ವಾನದ ಮೇಲೆ, ಪ್ರಥಮ ಭಾರತ ಉತ್ಸವದಲ್ಲಿ ಭಾಗವಹಿಸಲು ಇಂಗ್ಲೆಂಡಿಗೆ ಹೋದದ್ದು

ಮೂರನೇ ಹಿಂದೀ ವಿಶ್ವ ಸಮ್ಮೇಳನದ ರಾಷ್ಟ್ರೀಯ ಸಮಿತಿ ಸದಸ್ಯ

ಗೋಕಾಕ್ ವರದಿ ಜಾರಿಗೊಳಿಸುವ ಸಮಿತಿ ಸದಸ್ಯ

ಧರ್ಮಸ್ಥಳದ ಐವತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ

ಕರ್ನಾಟಕ ರಾಜ್ಯ ಪ್ರಶಸ್ತಿ

೧೯೮೩

ವಿ.ವಿ. ಧನಸಹಾಯ ಆಯೋಗದ ರಾಷ್ಟ್ರೀಯ ಉಪನ್ಯಾಸಕರಾಗಿ ಆಯ್ಕೆ

ಮದರಾಸ್ ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಕೌನ್ಸಿಲ್ ಸದಸ್ಯ

೧೯೮೪

ನವೆಂಬರ್, ೨: ಗುಲಬರ್ಗಾ ವಿಶ್ವವಿದ್ಯಾನಿಲಯದ ಕುಲಪತಿ

ಭಾರತೀಯ ಜ್ಞಾನಪೀಠ ಪ್ರಶಸ್ತಿ ಆಯ್ಕೆ ಸಮಿತಿ ಸದಸ್ಯ (೩ ವರ್ಷ)

ಪದವಿಪೂರ್ವ ಶಿಕ್ಷಣ ಮಂಡಳಿ ಅಧ್ಯಕ್ಷ

ಬಿ.ಡಿ. ಗೊಯೆಂಕಾ ಪ್ರಶಸ್ತಿ ಆಯ್ಕೆ ಸಮಿತಿ ಸದಸ್ಯ (೪ ವರ್ಷ)

ವಿ.ವಿ. ಧನಸಹಾಯ ಆಯೋಗದ ಭಾರತೀಯ ಭಾಷೆಗಳ ಸಲಹಾ ಸಮಿತಿ ಸದಸ್ಯ

೧೯೮೫

ಐವತ್ತೇಳನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ (ಬೀದರ್)

ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

ಹೈದರಾಬಾದ್ ಹಿಂದೀ ಪ್ರಚಾರ ಸಭೆಯ ಸುವರ್ಣ ಮಹೋತ್ಸವ ಸನ್ಮಾನ

೧೯೮೬

ಸೆಪ್ಟೆಂಬರ್, ೧೦: ತಾತ್ವಿಕ ಕಾರಣಗಳಿಂದ ಕುಲಪತಿ ಹುದ್ದೆಗೆ ರಾಜೀನಾಮೆ

ಗರುತ್ಮಾನ್ - ಅಜ್ಞೇಯರ ಸಾಹಿತ್ಯ ಸಂಸ್ಥೆಯ ಸಲಹಾಕಾರ

ಕಾಮನ್‌ವೆಲ್ತ್ ವಿ.ವಿ. ಕುಲಪತಿಗಳ ಸಮ್ಮೇಳನದಲ್ಲಿ (ಪೆನಾಂಗ್ - ಮಲೇಷಿಯಾ) ಭಾಗಿ

ಶಿವಮೊಗ್ಗೆಯಲ್ಲಿ ಸಾರ್ವಜನಿಕ ಸನ್ಮಾನ

ಶಿವಮೊಗ್ಗೆ ಕರ್ನಾಟಕ ಸಂಘದ ಸನ್ಮಾನ

೧೯೮೭

ಫೆಬ್ರವರಿ, ೧೬: ಕುಲಪತಿ ಹುದ್ದೆಗೆ ರಾಜೀನಾಮೆ ಸ್ವೀಕಾರ

ಕನ್ನಡ ಅಧ್ಯಯನ ಸಂಸ್ಥೆ (ಮೈಸೂರು ವಿವಿ)ಯಲ್ಲಿ ನಿರ್ದೇಶಕರೆಂದು ನೇಮಕ- ಈ ನೇಮಕದ ನಿರಾಕರಣ- ಕನ್ನಡ ಮತ್ತು ಭಾಷಾಶಾಸ್ತ್ರದ ಪ್ರಾಧ್ಯಾಪಕರೆಂದು ಮರುನೇಮಕ

ಹದಿನಾಲ್ಕನೇ ಅಖಿಲ ಕರ್ನಾಟಕ ಜಾನಪದ ಸಮ್ಮೇಳನದ ಅಧ್ಯಕ್ಷ (ದಾವಣಗೆರೆ)

ಐ.ಬಿ.ಎಚ್. ಎಜುಕೇಷನ್ ಟ್ರಸ್ಟ್ ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷ

'ಗ್ರಂಥಲೋಕ' ವರ್ಷದ ಲೇಖಕ ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷ

ಎಂ.ಪಿ. ಬಿರ್ಲಾ ಸಂಸ್ಥೆಯ ವಿಶ್ವಕೋಶದ ಕನ್ನಡ ವಿಭಾಗದ ಸಂಯೋಜಕ

೧೯೮೮

ಪಂಪ ಪ್ರಶಸ್ತಿ ಆಯ್ಕೆ ಸಮಿತಿ ಸದಸ್ಯ

ಇಲಕಲ್ ಮಠಾಧೀಶರಿಂದ ಸನ್ಮಾನ

ಹುಬ್ಬಳ್ಳಿ- ಧಾರವಾಡ ನಗರಸಭೆಯ ರಾಜ್ಯೋತ್ಸವ ಸನ್ಮಾನ

ಮೈಸೂರು ರೋಟರಿ ಕ್ಲಬ್ ಸನ್ಮಾನ

ದ ಕರ್ನಾಟಕ ಯುನೈಟೆಡ್ ಅರ್ಬನ್ ಸಿಟಿಜನ್ಸ್ ಫೆಡೆರೇಷನ್ ಸನ್ಮಾನ

೧೯೮೯

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಉಪಾಧ್ಯಕ್ಷ

ಮೈಸೂರು ಜಿಲ್ಲಾ ನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನೆ (ನಂಜನಗೂಡು)

'ಸಂಪ್ರತಿ'ಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ

'ಸಂಪ್ರತಿ'ಗೆ ಐಬಿಎಚ್ ಎಜುಕೇಷನ್ ಟ್ರಸ್ಟ್ ಪ್ರಶಸ್ತಿ

'ಪ್ರಣಯ ಪದಾವಳಿ'ಗೆ ವರ್ಧಮಾನ ಪ್ರಶಸ್ತಿ

೧೯೯೦

ಕೊಡಗು ಜಿಲ್ಲಾ ಮೂರನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ (ಸೋಮವಾರಪೇಟೆ)

ಭಾರತೀಯ ಜೀವ ವಿಮಾ ನಿಗಮದ ದಕ್ಷಿಣ ಮಧ್ಯವಲಯದ ಸಲಹಾ ಸಮಿತಿ ಸದಸ್ಯ (೩ ವರ್ಷ)

ಮೊದಲನೆಯ ರಾಷ್ಟ್ರೀಯ ಪ್ರಾಕೃತ ಸಮ್ಮೇಳನದಲ್ಲಿ 'ಪ್ರಾಕೃತ- ಕರ್ನಾಟಕ ಪ್ರಭಾವ' ಗೋಷ್ಠಿ ಉದ್ಘಾಟನೆ (ಬೆಂಗಳೂರು)

ಏಳನೇ ದಿಲ್ಲಿ ಕನ್ನಡಿಗರ ಸಮ್ಮೇಳನ ಉದ್ಘಾಟನೆ (ದಿಲ್ಲಿ)

ಶಿವರಾಮ ಕಾರಂತ ಪ್ರತಿಷ್ಠಾನ ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷ

೧೯೯೧

ಮಧ್ಯ ಪ್ರದೇಶ ಸರ್ಕಾರದ ತುಲಸೀ ಸಮ್ಮಾನ್ ಪ್ರಶಸ್ತಿ ಆಯ್ಕೆ ಸಮಿತಿ ಸದಸ್ಯ

ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರದ (ತಂಜಾವೂರು) ಸದಸ್ಯ

ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಮಂಡಳಿಯ (ಐ.ಸಿ.ಸಿ.ಆರ್.) ಸದಸ್ಯ

ಫೆಬ್ರವರಿ, ೫: ಮೈಸೂರು ವಿಶ್ವವಿದ್ಯಾನಿಲಯದ ಸೇವೆಯಿಂದ ನಿವೃತ್ತಿ

ಬಳ್ಳಾರಿ ಜಿಲ್ಲಾ ಐದನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನೆ (ಸಂಡೂರು)

ಗುಲಬರ್ಗಾದಲ್ಲಿ ನಾಗರಿಕ ಸನ್ಮಾನ

ಕನ್ನಡ ಸಾಹಿತ್ಯ ಪರಿಷತ್ತಿನ ಅಮೃತ ಮಹೋತ್ಸವ ಸನ್ಮಾನ

ತುರುವೇಕೆರೆಯಲ್ಲಿ ಸಾರ್ವಜನಿಕ ಸನ್ಮಾನ

೧೯೯೨

ಕೋಲಾರ ಜಿಲ್ಲಾ ಮೂರನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನೆ (ಚಿಕ್ಕಬಳ್ಳಾಪುರ) ರಾಯಚೂರು ಜಿಲ್ಲಾ ಎರಡನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನೆ (ರಾಯಚೂರು)

ಸಾಹಿತ್ಯ ಅಕಾಡೆಮಿಯ ಪ್ರಾಚೀನ ಭಾರತೀಯ ಸಾಹಿತ್ಯ ಯೋಜನೆಯ ಮುಖ್ಯ ಸಂಪಾದಕ

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಅಖಿಲ ಭಾರತ ದ್ರಾವಿಡ ಭಾಷಾವಿಜ್ಞಾನಿಗಳ ಸಮ್ಮೇಳನದ ಅಧ್ಯಕ್ಷ (ತಿರುವನಂತಪುರ)

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ೧೯೯೦ ಪ್ರಶಸ್ತಿ

ದೇಶದ ಎಂಟು ಗಣ್ಯ ಸಾಹಿತಿಗಳಲ್ಲಿ ಒಬ್ಬರಾಗಿ ಪರಿಗಣಿಸಲ್ಪಟ್ಟು ಕೇಂದ್ರ ಸಾಹಿತ್ಯ ಅಕಾಡೆಮಿ ಜನರಲ್ ಕೌನ್ಸಿಲ್ಲಿಗೆ (೧೯೯೩-೯೮) ಸದಸ್ಯರಾಗಿ ಆಯ್ಕೆ

ಅಭಿನಂದನ ಗ್ರಂಥ ಸಮರ್ಪಣೆ (ಮೇ ೨೩, ೧೯೯೨)

೧.೫.೨: ಹಾ.ಮಾ.ನಾಯಕರ ಕೃತಿಗಳು

೧: ಕಥೆ, ಚಿತ್ರ, ಪ್ರಬಂಧ.

೧.೧: ಸಮ್ಮುಮನೆಯ ದೀಪ : ೧೯೫೭. ಮೈಸೂರು ಗೀತಾ ಬುಕ್‌ಹೌಸ್. ಕೆ.ಆರ್. ಸರ್ಕಲ್.

೧.೨: ಬಾಳ್ನೋಟಗಳು: ೧೯೫೦. ಮೈಸೂರು ಉಷಾ ಸಾಹಿತ್ಯ ಮಾಲೆ, ಚಂದ್ರಗುಪ್ತ ರಸ್ತೆ.

೧.೩: ಹಾವು ಮತ್ತು ಹೆಣ್ಣು : ೧೯೬೬. ಮೈಸೂರು. ಉಷಾ ಸಾಹಿತ್ಯಮಾಲೆ, ಚಂದ್ರಗುಪ್ತ ರಸ್ತೆ.

೨: ಜೀವನ ಚರಿತ್ರೆ.

೨.೧: ರವೀಂದ್ರನಾಥ್ ಠಾಕೂರ್: ೧೯೬೦. ಮೈಸೂರು. ಶಾರದಾ ಮಂದಿರ, ರಾಮಯ್ಯರ್ ರಸ್ತೆ.

೩: ಮಕ್ಕಳ ಸಾಹಿತ್ಯ

೩.೧: ಅಕ್ಕಮಹಾದೇವಿ: ೧೯೭೫ ಬೆಂಗಳೂರು ಭಾರತ ಭಾರತಿ ಪುಸ್ತಕ ಸಂಪದ.

೩.೨: ಗುರುದೇವ ರವೀಂದ್ರರು : ೧೯೬೧. ಮೈಸೂರು. ಶ್ರೀ ಲಕ್ಷ್ಮೀ ಬುಕ್ ಹೌಸ್, ರಾಮಯ್ಯರ್ ರಸ್ತೆ.

೩.೩: ಮಹಮ್ಮದ್ ಪೈಗಂಬರ್: ೧೯೫೨. ಮೈಸೂರು. ಶ್ರೀ ಲಕ್ಷ್ಮೀ ಬುಕ್ ಹೌಸ್, ರಾಮಯ್ಯರ್ ರಸ್ತೆ.

೪: ವಿಚಾರ, ವಿಮರ್ಶೆ

೪.೧: ಕನ್ನಡವನ್ನು ಕಟ್ಟುವ ಕೆಲಸ: ೧೯೮೭. ಬೆಂಗಳೂರು ಐ.ಬಿ.ಎಚ್. ಪ್ರಕಾಶನ.

೪.೨: ಜಾನಪದ ಸ್ವರೂಪ : ೧೯೯೦. ಮೈಸೂರು. ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ.

೪.೩: ಬೆಳ್ಳಿ ಕರ್ನಾಟಕ: ೧೯೮೧. ಮೈಸೂರು. ಗೋಧೂಳಿ, ಜಯಲಕ್ಷ್ಮಿಪುರಂ.

೪.೪: ಸಂಕೀರ್ಣ: ೧೯೬೬. ಮೈಸೂರು. ಸುರುಚಿ ಪ್ರಕಾಶನ, ಸರಸ್ವತಿಪುರಂ.

೪.೫: ಸಂಗ್ರಹ: ೧೯೬೯. ಮೈಸೂರು. ಶಾರದಾ ಮಂದಿರ, ರಾಮಯ್ಯರ್ ರಸ್ತೆ.

೪.೬: ಸಂದರ್ಭ: ೧೯೭೮, ಮೈಸೂರು. ಉಷಾ ಸಾಹಿತ್ಯ ಮಾಲೆ, ಚಂದ್ರಗುಪ್ತ ರಸ್ತೆ.

೪.೮: ಸಂವಾದ: ೧೯೭೨. ಉಷಾ ಸಾಹಿತ್ಯ ಮಾಲೆ, ಚಂದ್ರಗುಪ್ತ ರಸ್ತೆ, ಮೈಸೂರು.

೪.೯: ಸಪ್ತಕ: ೧೯೭೯. ಮೈಸೂರು ಕಾರ್ಯಾಲಯ.

೪.೧೦: ಸಮೀಕ್ಷೆ: ೧೯೬೭. ಗೀತಾ ಬುಕ್ ಹೌಸ್, ಕೆ.ಆರ್. ಸರ್ಕಲ್, ಮೈಸೂರು.

೪.೧೧: ಸಿಂಗಾರ: ೧೯೮೧. ಉಷಾ ಸಾಹಿತ್ಯಮಾಲೆ, ಚಂದ್ರಗುಪ್ತ ರಸ್ತೆ, ಮೈಸೂರು.

೪.೧೨: ಸೃಜನ: ೧೯೮೧. ಮೈಸೂರು. ಗೀತಾಬುಕ್ ಹೌಸ್, ಕೆ.ಆರ್.ಸರ್ಕಲ್.

೪.೧೩: ಸ್ತವನ: ೧೯೮೦. ಮೈಸೂರು. ಮಿತ್ರ ಪ್ರಕಾಶನ, ೨೪, ಸರಸ್ವತೀಪುರಂ, ಹೊಸ ಬಡಾವಣೆ.

೪.೧೪: ಸ್ಮರಣ: ೧೯೮೧. ಮೈಸೂರು. ಮಿತ್ರಪ್ರಕಾಶನ, ೨೪ ಸರಸ್ವತಿಪುರಂ, ಹೊಸ ಬಡಾವಣೆ.

೪.೧೫: ಸಿವುಡು: ೧೯೯೧. ಮೈಸೂರು. ಶಾರದಾ ಮಂದಿರ, ರಾಮಯ್ಯರ್ ರಸ್ತೆ.

೪.೧೬: ಸಂಭ್ರಮ: ೧೯೯೧. ಬೆಂಗಳೂರು. ಸುವಿದ್ಯಾ ಪ್ರಕಾಶನ, ೭ ಸರ್ವೇಯರ್ ರಸ್ತೆ, ಬಸವನಗುಡಿ.

೪.೧೭: ಸೊಡರು: ೧೯೯೧. ಮೈಸೂರು. ಕಾವ್ಯಾಲಯ, ಜಯನಗರ.

೪.೧೮: ಸಿಂಚನ: ೧೯೯೧. ಬೆಂಗಳೂರು. ಸುವಿದ್ಯಾಪ್ರಕಾಶನ. ೭. ಸರ್ವೇಯರರಸ್ತೆ, ಬಸವನಗುಡಿ.

೪.೧೯: ಕನ್ನಡ ಮನಸ್ಸು: ೧೯೯೧. ಹುಬ್ಬಳ್ಳಿ. ಮಿಂಚಿನ ಬಳ್ಳಿ ಗ್ರಂಥಮಾಲೆ.

೫: ಅಂಕಣ ಆಕಾಶವಾಣಿ ಬರಹಗಳು.

೫.೧: ಗ್ರಂಥಲೋಕದ ಸುತ್ತಮುತ್ತ: ೧೯೮೪. ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು.

೫.೨: ಸಂಗತಿ: ೧೯೮೭. ಗೀತಾಬುಕ್ ಹೌಸ್, ಕೆ.ಆರ್.ಸರ್ಕಲ್, ಮೈಸೂರು.

೫.೩: ಸಂಪದ: ೧೯೮೧. ಮೈಸೂರು. ಅಪರ್ಣಾ ಪ್ರಕಾಶನ, ೪೯, ಅಕ್ಷಯ, ಟಿ.ಕೆ. ಬಡಾವಣೆ, ಸರಸ್ವತೀಪುರಂ.

೫.೪: ಸಂಪರ್ಕ: ೧೯೮೨. ಮೈಸೂರು. ಮಿತ್ರ ಪ್ರಕಾಶನ, ೨೪, ಕುಮಾರಾಕೃಪಾ ಕುವೆಂಪು ನಗರ.

೫.೫: ಸಂಪುಟ: ೧೯೮೦. ಮೈಸೂರು. ಅಪರ್ಣಾ ಪ್ರಕಾಶನ, ೪೯ ಅಕ್ಷಯ, ಟಿ.ಕೆ. ಬಡಾವಣೆ, ಸರಸ್ವತೀಪುರಂ.

೫.೬: ಸಂಪ್ರತಿ: ೧೯೮೮. ಬೆಂಗಳೂರು. ಐ.ಬಿ. ಎಚ್. ಪ್ರಕಾಶನ, ೫ನೇ ಮುಖ್ಯರಸ್ತೆ, ಗಾಂಧಿನಗರ.

೫.೭: ಸಂವಹನ. ೧೯೮೩. ಮಿತ್ರ ಪ್ರಕಾಶನ, ೨೪ ಕುಮಾರಾಕೃಪಾ, ಕುವೆಂಪು ನಗರ, ಮೈಸೂರು.

೫.೮: ಸಮೂಹ: ೧೯೮೨. ಮಿತ್ರ ಪ್ರಕಾಶನ, ೨೪. ಕುಮಾರಾ ಕೃಪಾ ಕುವೆಂಪುನಗರ.

೫.೯: ಸಲ್ಲಾಪ: ೧೯೭೨. ಮೈಸೂರು. ಸುರುಚಿ ಪ್ರಕಾಶನ, ಸರಸ್ವತಿಪುರಂ.

೫.೧೦: ಸಾಹಿತ್ಯ ಸಲ್ಲಾಪ: ೧೯೭೦. ಮೈಸೂರು. ಸುರುಚಿ ಪ್ರಕಾಶನ, ಸರಸ್ವತಿಪುರಂ.

೫.೧೧: ಸೂಲಂಗಿ: ೧೯೮೫. ಮೈಸೂರು. ಗೀತಾಬುಕ್ ಹೌಸ್, ಕೆ.ಆರ್. ಸರ್ಕಲ್.

೫.೧೨: ಸ್ಪಂದನ: ೧೯೮೩. ಮೈಸೂರು. ಸುರುಚಿ ಪ್ರಕಾಶನ, ಸರಸ್ವತಿಪುರಂ.

೫.೧೩: ಸಾಂಪ್ರತ: ೧೯೮೩. ಮೈಸೂರು. ಮಿತ್ರಪ್ರಕಾಶನ, ೨೪ ಕುಮಾರಕೃಪಾ ಕುವೆಂಪುನಗರ.

೫.೧೪: ಸಂಬಲ: ೧೯೯೦. ಮೈಸೂರು. ತ.ವೆಂ.ಸ್ಮಾರಕಗ್ರಂಥಮಾಲೆ, ಗೋಕುಲಂ ೩ನೇ ಹಂತ.

೫.೧೫: ಸಂಪಣ: ೧೯೯೦. ಮೈಸೂರು. ಗೀತಾಬುಕ್ ಹೌಸ್, ಕೆ.ಆರ್. ಸರ್ಕಲ್.

೫.೧೬: ಸಂಪ್ರತಿ ೨: ೧೯೯೧. ಮೈಸೂರು. ಗೀತಾಬುಕ್ ಹೌಸ್, ಕೆ.ಆರ್. ಸರ್ಕಲ್.

೫.೧೭: ಸಂಪ್ರತಿ -೩: ೧೯೯೧. ಮೈಸೂರು. ಗೀತಾ ಬುಕ್ ಹೌಸ್, ಕೆ.ಆರ್.ಸರ್ಕಲ್.

೫.೧೮: ಅರುವತ್ತರ ಆರಲು: ೧೯೯೫. ಮೈಸೂರು. ತಳುಕಿನ ವೆಂಕಣ್ಣಯ್ಯನವರ ಸ್ಮಾರಕ ಗ್ರಂಥಮಾಲೆ, ಗೋಕುಲಂ.

೬ : ಅನುವಾದ

೬.೧:- ಪ್ರಣಯ ಪದಾವಳಿ: ೧೯೮೪. ಮೈಸೂರು. ತ. ವೆಂ. ಸ್ಮಾರಕ ಗ್ರಂಥಮಾಲೆ, ಗೋಕುಲಂ ಮೂರನೆಯ ಹಂತ.

೬.೨: ಶಾಂತಿ ಸ್ವರೂಪ ಭಾಟ್ನಾಗರ್: ಕೆ.ವಿ. ಶ್ರೀನಾಥ್, ೧೯೫೪. ಮೈಸೂರು. ಆಹಾರ ಸಂಶೋಧನಾ ಕೇಂದ್ರ.

೬.೩: ಸುನೇರಿ: ೧೯೮೬. ಬೆಂಗಳೂರು. ಐ.ಬಿ.ಎಚ್. ಪ್ರಕಾಶನ, ೫ನೇ ಮುಖ್ಯರಸ್ತೆ, ಗಾಂಧಿನಗರ.

೭: ಸಂಪಾದನ ವಿಭಾಗ.

೭.೧: ಅಪ್ಪಯ್ಯ: (ಅ) ಸ್ವಸಂಪಾದಿತ, ೧೯೮೪. ಮೈಸೂರು. ಗೋಧೂಳಿ, ಜಯಲಕ್ಷ್ಮಿಪುರಂ.

೭.೨: ಆಲೂರು ವೆಂಕಟರಾಯರು: ೧೯೮೩. ಮೈಸೂರು. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ.

೭.೩: ಕನ್ನಡ ಡಿಂಡಿಮ: ೧೯೭೭. ಮೈಸೂರು. ಸುರುಚಿ ಪ್ರಕಾಶನ, ಸರಸ್ವತೀಪುರಂ. (ಮೂ.ಮು)

೭.೪: ಕರ್ನಾಟಕಕ್ಕೆ ಶುಭವಾಗಲಿ: ೧೯೭೬. ಮೈಸೂರು. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ.

೭.೫: ಕಾವ್ಯ ಕಾರಂಜಿ: ೧೯೮೨. ಮೈಸೂರು. ದಸರಾ ಮಹೋತ್ಸವ ಸಮಿತಿ.

೭.೬: ಕಾವ್ಯದೀಪ: ೧೯೮೩. ಮೈಸೂರು. ದಸರಾ ಮಹೋತ್ಸವ ಸಮಿತಿ.

೭.೮: ಕಾವ್ಯನವರಾತ್ರಿ: ೧೯೮೦. ಮೈಸೂರು. ದಸರಾ ಮಹೋತ್ಸವ ಸಮಿತಿ.

೭.೯: ಕಾವ್ಯಮೇಳ: ೧೯೮೪. ಮೈಸೂರು. ದಸರಾ ಮಹೋತ್ಸವ ಸಮಿತಿ.

೭.೧೦: ಕಾವ್ಯೋತ್ಸವ: ೧೯೮೧. ಮೈಸೂರು. ದಸರಾ ಮಹೋತ್ಸವ ಸಮಿತಿ.

೭.೧೧ ಗಳಗನಾಥ: ೧೯೭೦. ಮೈಸೂರು. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮಾಸನಗಂಗೋತ್ರಿ.

೭.೧೨: ಗೊರೂರು: ಗೌರವ ಗ್ರಂಥ. ೧೯೭೩. ಮೈಸೂರು. ಗೊರೂರು ಗೆಳೆಯರ ಬಳಗ.

೭.೧೩: ಗೋವಿಂದ ಪೈ: ೧೯೮೩. ಮೈಸೂರು. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು. ವಿ.ವಿ. ಮಾನಸಗಂಗೋತ್ರಿ.

೭.೧೪: ಚಿನ್ನದ ಗರಿ: ೧೯೭೪. ಮೈಸೂರು. ಕನ್ನಡ ಅ. ಸಂಸ್ಥೆ, ಮೈಸೂರು ವಿ.ವಿ., ಮಾನಸ ಗಂಗೋತ್ರಿ.

೭.೧೫: ಟಾಲ್‌ಸ್ಟಾಯ್: ೧೯೮೨. ಮೈಸೂರು. ಕನ್ನಡ ಅ.ಸಂ, ಮೈಸೂರು ವಿ.ವಿ., ಮಾನಸ ಗಂಗೋತ್ರಿ.

೭.೧೬: ಡಿ.ವಿ.ಜಿ. ಕೃತಿಶ್ರೇಣಿ ಸಂಪುಟ: ವಿಚಾರ, ವಿಮರ್ಶೆ: ೧೯೮೭. ಬೆಂಗಳೂರು. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ೧೪:೩ ಎ. ನೃಪತುಂಗ ರಸ್ತೆ.

೭.೧೭: ಡಿ.ವಿ.ಜಿ. ಕೃತಿ ಶ್ರೇಣಿ ಸಂಪುಟ -೨ ಜೀವನಧರ್ಮಯೋಗ: ೧೯೯೦. ಬೆಂಗಳೂರು. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ೧೪:೩. ಎ. ನೃಪತುಂಗ ರಸ್ತೆ.

೭.೧೮: ದಾರ್ಶನಿಕ ಕಾವ್ಯಮೀಮಾಂಸೆ: ೧೯೮೩. ಬೆಂಗಳೂರು. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ೧೪:೩ ಎ. ನೃಪತುಂಗ ರಸ್ತೆ.

೭.೧೯: ದೇಜಗೌ: ವ್ಯಕ್ತಿ ಮತ್ತು ಸಾಹಿತ್ಯ: ೧೯೬೯. ಮೈಸೂರು. ದೇಜಗೌ ಗೆಳೆಯರ ಬಳಗ.

೭.೨೦: ನಿಸರ್ಗದಡಿಯಲ್ಲಿ: ೧೯೫೧. ಧಾರವಾಡ. ಪ್ರತಿಭಾ ಗ್ರಂಥಮಾಲೆ.

೭.೨೧: ಪ್ರಗತಿಪಥ: ೧೯೭೬. ಮೈಸೂರು. ಕನ್ನಡ ಅ. ಸಂ., ಮೈಸೂರು. ವಿ.ವಿ., ಮಾನಸ ಗಂಗೋತ್ರಿ.

೭.೨೨: ಬಸವ ಪರುಷ: ೧೯೭೫. ಮೈಸೂರು. ಕನ್ನಡ ಅ.ಸಂ., ಮೈಸೂರು ವಿ.ವಿ., ಮಾನಸ ಗಂಗೋತ್ರಿ.

೭.೨೩: ಬಿಡುಗಡೆ ಬೆಳ್ಳಿ: ೧೯೭೫. ಮೈಸೂರು. ಕನ್ನಡ ಅ.ಸಂ., ಮೈಸೂರ ವಿ.ವಿ., ಮಾನಸಗಂಗೋತ್ರಿ.

೭.೨೪: ಭಾರತೀಯ ಸಾಹಿತ್ಯದಲ್ಲಿ ಗಾಂಧೀಜಿ: ಕನ್ನಡ ಅ.ಸಂ., ಮೈಸೂರು ವಿ.ವಿ., ಮೈಸೂರು. ಮಾನಸಗಂಗೋತ್ರಿ.

೭.೨೫: ಮುದ್ದಣ: ೧೯೭೦. ಮೈಸೂರು. ಕನ್ನಡ ಅ.ಸಂ., ಮೈಸೂರು. ವಿ.ವಿ., ಮಾನಸಗಂಗೋತ್ರಿ.

೭.೨೬: ಮುಮ್ಮಡಿ ಕೃಷ್ಣರಾಜ ಒಡೆಯರು: ೧೯೭೦. ಕನ್ನಡ ಅ.ಸಂ., ಮೈಸೂರು ವಿ.ವಿ., ಮಾನಸಗಂಗೋತ್ರಿ.

೭.೨೭: ರೂಪಾರಾಧಕ: ೧೯೫೩. ಮೈಸೂರು. ಉಷಾ ಸಾಹಿತ್ಯ ಮಾಲೆ.

೭.೨೮: ವಿಜ್ಞಾನ ನಿರ್ಮಾಣ: ೧೯೭೧. ಮೈಸೂರು. ಕನ್ನಡ ಅ.ಸಂ., ಮೈಸೂರು. ವಿ.ವಿ., ಮಾನಸಗಂಗೋತ್ರಿ.

೭.೨೯: ಶರತ್ ಚಂದ್ರ: ೧೯೭೮. ಮೈಸೂರು. ಕ.ಅ.ಸಂ, ಮೈಸೂರು ವಿ.ವಿ., ಮಾನಸಗಂಗೋತ್ರಿ.

೭.೩೦: ಶಾಸ್ತ್ರ ಸಾಹಿತ್ಯ ನಿರ್ಮಾಣ: ೧೯೭೫. ಮೈಸೂರು. ಕನ್ನಡ ಅ.ಸಂ., ಮೈಸೂರು. ವಿ.ವಿ., ಮಾನಸಗಂಗೋತ್ರಿ.

೭.೩೧. ಶ್ರೀನಿವಾಸ ಸಾಹಿತ್ಯ: ೧೯೭೪. ಮೈಸೂರು. ಮಾಸ್ತಿ ಸನ್ಮಾನ ಸಮಿತಿ ಪರವಾಗಿ ಡಿ.ವಿ.ಕೆ. ಮೂರ್ತಿ, ಕೃಷ್ಣಮೂರ್ತಿಪುರಂ.

೭.೩೨: ಶ್ರೀವಾಣಿ: ೧೯೮೪, ಬೆಂಗಳೂರು. ಬಿ.ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ.

೭.೩೩: ಶ್ರೀ ಸಾಹಿತ್ಯ: ೧೯೮೩. ಮೈಸೂರು. ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿ.ವಿ., ಮಾನಸಗಂಗೋತ್ರಿ.

೭.೩೪: ಸರ್ವಜ್ಞ: ೧೯೭೬. ಮೈಸೂರು. ಕನ್ನಡ ಅ.ಸಂ., ಮೈ. ವಿ.ವಿ., ಮಾನಸ ಗಂಗೋತ್ರಿ.

೭.೩೫: ಸಿದ್ಧಲಿಂಗ ಶಿವಯೋಗಿ: ೧೯೭೪. ಮೈಸೂರು. ಕನ್ನಡ ಅ.ಸಂ., ಮೈಸೂರು. ವಿ.ವಿ., ಮಾನಸಗಂಗೋತ್ರಿ.

೭.೩೬: ಹಕ್ಕಿಯ ಪಯಣ: ೧೯೮೩. ಬೆಂಗಳೂರು. ಕನ್ನಡ ಮತ್ತು ಸಂಸ್ಕೃತಿ ನಿರ್ದೇಸಾಲಯ, ೧೪:೩ ನೃಪತುಂಗ ರಸ್ತೆ.

೭.೩೭: ವೆಂಕಣ್ಣಯ್ಯ ಕೆಲವು ಪ್ರಸಂಗಗಳು: ೧೯೯೧. ಗ್ರಂಥಮಾಲೆ. ಮೈಸೂರು. ತ.ವೆಂ. ಸ್ಮಾರಕ

೮. ಇತರರೊಡನೆ ಸಂಪಾದಿತ:-

೮.೧: ಎ.ಆರ್. ಕೃ. ಜೀವನ ಸಾಧನೆ: ೧೯೭೧. ಪ್ರಸಾರಾಂಗ, ಮೈಸೂರು. ಮಾನಸಗಂಗೋತ್ರಿ

೮.೨: ಪ್ರಬುದ್ಧ ಕರ್ನಾಟಕ ಚಿನ್ನದ ಸಂಚಿಕೆ (ವಿಜ್ಞಾನ ವಿಭಾಗ): ೧೯೬೯. ಮೈಸೂರು. ಪ್ರಸಾರಾಂಗ, ಮೈಸೂರು ವಿ.ವಿ., ಮಾನಸಗಂಗೋತ್ರಿ.

೮.೩: ಪ್ರಬುದ್ಧ ಕರ್ನಾಟಕ ಚಿನ್ನದ ಸಂಚಿಕೆ (ವಿಜ್ಞಾನ ವಿಭಾಗ ೨): ೧೯೬೯. ಮೈಸೂರು. ಪ್ರಸಾರಾಂಗ, ಮೈಸೂರು. ವಿ.ವಿ., ಮಾನಸಗಂಗೋತ್ರಿ.

೮.೪: ಪ್ರಬುದ್ಧ ಕರ್ನಾಟಕ ಚಿನ್ನದ ಸಂಚಿಕೆ (ಸಾಹಿತ್ಯ ಸಂಪುಟ): ೧೯೬೯. ಮೈಸೂರು. ಪ್ರಸಾರಾಂಗ, ಮೈಸೂರು ವಿ.ವಿ., ಮಾನಸಗಂಗೋತ್ರಿ.

೮.೫: ಬಾಗಿನ: ೧೯೫೪. ಮೈಸೂರು. ಮಹಾರಾಜ ಕಾಲೇಜ್.

೮.೬: ಭಾರತೀಯ ಕವಿತಾಯೇಂ: ೧೯೮೩. ನವದೆಹಲಿ. ಭಾರತೀಯ ಜ್ಞಾನಪೀಠ, ೧೮- ಇನ್ಸ್‌ಟಿಟ್ಯೂಷನ್ ಏರಿಯಾ, ಲೋಧಿರಸ್ತೆ.

೮.೭: ಭಾರತೀಯ ಕವಿತಾಯೇಂ: ೧೯೮೪. ನವದೆಹಲಿ. ಭಾರತೀಯ ಜ್ಞಾನಪೀಠ, ೧೮ ಇನ್ಸ್‌ಟಿಟ್ಯೂಷನಲ್ ಏರಿಯಾ, ಲೋಧಿರಸ್ತೆ.

೮.೮: ಭಾಸ್ಕರ ಕವಿಯ ಜೀವಂಧರ ಚರಿತೆಯ ಸಂಗ್ರಹ: ೧೯೬೩. ಬೆಂಗಳೂರು. ನರೇಶ್ ಆ್ಯಂಡ್ ಕಂಪನಿ, ಮೌಂಟ್ ಜಾಯ್ ರಸ್ತೆ. (ಎ.ಮು)

೮.೯: ರತ್ನಸಂಪುಟ: ೧೯೮೫. ಮೈಸೂರು. ಪ್ರಸಾರಾಂಗ, ಮೈಸೂರು ವಿ.ವಿ. ಮಾನಸಗಂಗೋತ್ರಿ.

೮.೧೦: ವಿನಾಯಕ ವಾಙ್ಮಯ: ೧೯೬೯. ಮೈಸೂರು. ಸುರುಚಿ ಪ್ರಕಾಶನ, ಸರಸ್ವತೀಪುರಂ.

೮.೧೧: ಸುವರ್ಣ ಸಂಪುಟ: ೧೯೮೦. ಮೈಸೂರು. ಪ್ರಸಾರಾಂಗ, ಮೈಸೂರು ವಿ.ವಿ. ಮಾನಸಗಂಗೋತ್ರಿ.

೮.೧೨: ಸ್ವಸ್ತಿ: ೧೯೮೩. ಮೈಸೂರು. ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಗೋಕುಲಂ ೩ನೇ ಹಂತ.

೮.೧೩: ಹೊಸ ಸಂವೇದನೆಯ ನಾಟಕಗಳು: ೧೯೮೬. ಮೈಸೂರು. ಸುರುಚಿ ಸಾಹಿತ್ಯ, ಕುವೆಂಪು ನಗರ,

೯. ಪಠ್ಯಪುಸ್ತಕಗಳ ವಿಭಾಗ

೯.೧: ಕನ್ನಡ ಭಾರತಿ ೬: ೧೯೭೦. ಕರ್ನಾಟಕ ಸರ್ಕಾರದ ಪಠ್ಯಪುಸ್ತಕಗಳ ಇಲಾಖೆ.

೯.೨: ಕಾವ್ಯವಿಲಾಸ: ೧೯೭೨. ಮೈಸೂರು. ಪ್ರಿ ಯೂನಿವರ್ಸಿಟಿ ಶಿಕ್ಷಣ ಮಂಡಳಿಗಾಗಿ, ಪ್ರಸಾರಾಂಗ, ಮೈಸೂರು ವಿ.ವಿ., ಮಾನಸಗಂಗೋತ್ರಿ.

೯.೩: ಕಾವ್ಯಸಂಚಯ: ೧೯೭೧. ಮೈಸೂರು. ಕನ್ನಡ ಅ. ಸಂ., ಮೈಸೂರು ವಿ.ವಿ.

೯.೪: ಕಾವ್ಯಸಂಚಯ ೨: ೧೯೭೮. ಕನ್ನಡ ಅ.ಸಂ., ಮೈಸೂರು ವಿ.ವಿ. ಮಾನಸಗಂಗೋತ್ರಿ.

೯.೫: ಕಾವ್ಯಸಂಚಯ ೩: ೧೯೯೩. ಕನ್ನಡ ಅ.ಸಂ. ಮೈಸೂರು ವಿ.ವಿ., ಮಾನಸಗಂಗೋತ್ರಿ.

೯.೬: ಗದ್ಯಪದ್ಯ ಸಂಗಮ: ೧೯೭೨. ಪ್ರಿಯೂನಿವರ್ಸಿಟಿ ಶಿಕ್ಷಣ ಮಂಡಳಿಗಾಗಿ, ಪ್ರಸಾರಾಂಗ, ವಿ.ವಿ. ಮಾನಸಗಂಗೋತ್ರಿ.

೯.೭: ಗದ್ಯ ವಿಹಾರ ೧: ೧೯೭೦. ಕನ್ನಡ ಅ.ಸಂ., ಮೈಸೂರು ವಿ.ವಿ., ಮನಸಗಂಗೋತ್ರಿ.

೯.೮: ಗದ್ಯ ವಿಹಾರ ೨: ೧೯೭೨. ಕನ್ನಡ ಅ.ಸಂ., ಮೈಸೂರು ವಿ.ವಿ., ಮಾನಸಗಂಗೋತ್ರಿ.

೯.೯: ಗದ್ಯ ವಿಹಾರ ೩: ೧೯೮೩. ಕನ್ನಡ ಅ.ಸಂ., ಮೈಸೂರು ವಿ.ವಿ., ಮಾನಸಗಂಗೋತ್ರಿ.

೯.೧೦: ಗದ್ಯ ವಿಹಾರ ೪: ಕನ್ನಡ ಸಂ., ಮೈಸೂರು ವಿ.ವಿ., ಮಾನಂಸಗಂಗೋತ್ರಿ,

೯.೧೧: ವಿಮರ್ಶೆಯ ಮಾರ್ಗ ೧ ಕನ್ನಡ ಸಂ. ೧೯೮೪. ಮೈಸೂರು ವಿ.ವಿ. ಮಾನಸಗಂಗೋತ್ರಿ.

೯.೧೨: ಸಾಹಿತ್ಯ ಸಂಪುಟ: ೧೯೭೩. ಮೈಸೂರು ಸರ್ಕಾರದ ಪಠ್ಯಪುಸ್ತಕಗಳ ಇಲಾಖೆ.

೯.೧೩: ಸಾಹಿತ್ಯ ಸುಗ್ಗಿ: ೧೯೬೯. ಮೈಸೂರು ವಿದ್ಯಾ ಇಲಾಖೆ (ವಿದ್ಯಾಸಂಶೋಧನ ಶಾಖೆ).

೯.೧೪: ಆಧುನಿಕ ಕನ್ನಡ ಬರಹಗಾರರು: ೧೯೮೩. ಮೈಸೂರು. ಪ್ರಸಾರಾಂಗ, ಮೈಸೂರು ವಿ.ವಿ. ಮಾನಸಗಂಗೋತ್ರಿ.

೯.೧೫: ಕಚೇರಿ ಕೈಪಿಡಿ: ೧೯೮೪. ಕನ್ನಡ ಅ.ಸಂ., ಮೈಸೂರು ವಿ.ವಿ., ಮಾನಸಗಂಗೋತ್ರಿ,

೯.೧೬: ಕನ್ನಡ ಗ್ರಂಥಸೂಚಿ ೨: ೧೯೭೫. ಪ್ರಸಾರಾಂಗ, ಮೈಸೂರು ವಿ.ವಿ., ಮಾನಸಗಂಗೋತ್ರಿ.

೯.೧೭: ಕನ್ನಡ ಗ್ರಂಥ ಸೂಚಿ ೩: ೧೯೭೪. ಪ್ರಸಾರಾಂಗ, ಮೈಸೂರು. ವಿ.ವಿ., ಮಾನಸಗಂಗೋತ್ರಿ.

೯.೧೮: ಕನ್ನಡ ಗ್ರಂಥ ಸೂಚಿ ೪: ೧೯೭೪. ಪ್ರಸಾರಾಂಗ, ಮೈಸೂರು ವಿ.ವಿ., ಮಾನಸಗಂಗೋತ್ರಿ.

೯.೧೯: ಕನ್ನಡ ಗ್ರಂಥ ಸೂಚಿ ೫: ೧೯೭೯. ಪ್ರಸಾರಾಂಗ, ಮೈಸೂರು. ವಿ.ವಿ., ಮಾನಸಗಂಗೋತ್ರಿ.

೯.೨೦: ಕನ್ನಡ ಗ್ರಂಥ ಸೂಚಿ ೬: ೧೯೭೯. ಪ್ರಸಾರಾಂಗ, ಮೈಸೂರು. ವಿ.ವಿ., ಮಾನಸಗಂಗೋತ್ರಿ.

೯.೨೧: ಕನ್ನಡ ಗ್ರಂಥ ಸೂಚಿ ೭: ಪ್ರಸಾರಾಂಗ, ಮೈಸೂರು. ವಿ.ವಿ., ಮಾನಸಗಂಗೋತ್ರಿ.

೯.೨೨: ಕನ್ನಡ ಗ್ರಂಥ ಸೂಚಿ ೮: ೧೯೬೯-೭೧. ಪ್ರಸಾರಾಂಗ, ಮೈಸೂರು ವಿ.ವಿ., ಮಾನಸಗಂಗೋತ್ರಿ.

೯.೨೩: ಕನ್ನಡ ಗ್ರಂಥಸೂಚಿ ೯: ೧೯೭೨-೭೩. ಪ್ರಸಾರಾಂಗ, ಮೈಸೂರು. ವಿ.ವಿ., ಮಾನಸಗಂಗೋತ್ರಿ.

೯.೨೪: ಕನ್ನಡ ಗ್ರಂಥ ಸೂಚಿ ೧೦: ೧೯೭೪-೭೬. ಪ್ರಸಾರಾಂಗ, ಮೈಸೂರು. ವಿ.ವಿ., ಮಾನಸಗಂಗೋತ್ರಿ.

೯.೨೫: ಕನ್ನಡ ಗ್ರಂಥ ಸೂಚಿ ೧೧: ೧೯೭೭- ೮೦. ಪ್ರಸಾರಾಂಗ, ಮೈಸೂರು ವಿ.ವಿ., ಮಾನಸಗಂಗೋತ್ರಿ.

೯.೨೬: ಕನ್ನಡ ಜಾನಪದ ಗ್ರಂಥ ಸೂಚಿ: ಕನ್ನಡ ಅ.ಸಂ., ಮೈಸೂರು ವಿ.ವಿ., ಮಾನಸಗಂಗೋತ್ರಿ.

೯.೨೭: ಕನ್ನಡ ರತ್ನಕೋಶ: ೧೯೭೭. ಬೆಂಗಳೂರು. ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿರಸ್ತೆ, ಚಾಮರಾಜಪೇಟೆ.

೯.೨೯ ಗೋಕಾಕ ಗ್ರಂಥಾವಳಿ: ೧೯೮೦. ಮೈಸೂರು. ಸುರುಚಿ ಪ್ರಕಾಶನ, ಸರಸ್ವತೀಪುರಂ.

೯.೩೦ ಮಾಸ್ತಿಯವರ ಪುಸ್ತಕಗಳು: ೧೯೮೩. ಬೆಂಗಳೂರು. ಪ್ರಸಾರಾಂಗ, ಬೆಂಗಳೂರು ವಿ.ವಿ.,

೯.೩೧ ಕಾದಂಬರಿ ಲೋಕ: ೧೯೯೦. ಮೈಸೂರು. ಗೀತಾ ಬುಕ್ ಹೌಸ್, ಕೆ. ಆರ್. ಸರ್ಕಲ್.

೯.೩೨ ಭಾರತೀಯ ಕವಿತಾಯೇ: ೧೯೮೬. ಭಾರತೀಯ ಜ್ಞಾನಪೀಠ, ೧೮ ಇನ್‌ಸ್ಟಿಟ್ಯೂಷನಲ್ ಏರಿಯಾ, ಲೋಧಿ ರಸ್ತೆ, ನವದೆಹಲಿ.

1: In English

10.1 Epic in Indian Literature (Ed.) 1985. Mysore. Institute of Kannada studies, University of Mysore, Manasagangotri.

10.2 Gandhiji in Indian literature (Ed.) 1971. Mysore. Institute of Kannada, studies, University of Mysore Manasagangothri.

10.3 Impact of marxism on Indian life and literature (Ed.) 1972. Mysore. Institute of Kannada Studies, University of Mysore, Manasagangothri.

10.4 Kannada : Literary and Colloquial; -A Study of two styles, 1967. Mysore. Rao and Raghavan, Prince of Wales Road.

10.5 South Indian studies (Ed.) Mysore. Geetha Book House, K.R. Circle.

❑

೧.೫.೩: ಆಧಾರ ಗ್ರಂಥಗಳು

೧. ಹಾ.ಮಾ.ನಾ. ಸ್ನೇಹಿತರು ಮತ್ತು ಅಭಿಮಾನಿಗಳು; ೧೯೯೧, ಹಾ.ಮಾ.ನಾ. ಹೇಳುತ್ತಾರೆ. ಧಾರವಾಡ. ಬಿ-೩ ವಿದ್ಯಾಗಿರಿ.

೨. ನಾರಾಯಣಮ್ಮ ಮತ್ತು ಜನಾರ್ಧನನಾಯ್ಡು; ೧೯೯೦. ಕನ್ನಡ ನಾಯಕ ಹಾ.ಮಾ.ನಾಯಕರು. ಚಿಕ್ಕಮಗಳೂರು, ಕೋಟೆ ಸುಗ್ಗಿಕಲ್ ರಸ್ತೆ

೩. ಪ್ರಧಾನ್ ಗುರುದತ್ ; ೧೯೯೨. ಹಾ.ಮಾ.ನಾ. ಒಂದು ಅಧ್ಯಯನ, ಮೈಸೂರು. ಶಾರದಾಮಂದಿರ, ೧೪೯೮/೨೫ ರಾಮಯ್ಯರ್ ರಸ್ತೆ.

೪. (ಸಂ) ಭೈರಪ್ಪ ಎಸ್. ಎಲ್, ಲಕ್ಷ್ಮಣರಾವ್, ಪ್ರಧಾನ್ ಗುರುದತ್: ೧೯೯೦. ಮಾನ. ಮೈಸೂರು. ಗೀತಾ ಬುಕ್ ಹೌಸ್.

೫. ರಾಜಪ್ಪ ದಳವಾಯಿ. ಆರ್; ೧೯೯೧. ನೆನಪುಗಳು ಸಾಯುವುದಿಲ್ಲ. ಅನುವನಹಳ್ಳಿ. ವೈಚಾರಿಕ ಪುಸ್ತಕಮಾಲೆ.

೬. ಶಾರದಾ ಪ್ರಸಾದ್ ಎನ್.ಎಸ್.(ಸಂ), ೧೯೯೧. ಹಾ.ಮಾ.ನಾಯಕ ಅವರನ್ನು ಕುರಿತು. ಮೈಸೂರು. ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ.

೭. ಸುಜಾತ; ೧೯೯೧. ಹಾ.ಮಾ.ನ. ಹೊತ್ತಗೆಗಳು. ಮೈಸೂರು. ಸುಹಾಸ್ ಪ್ರಕಟಣೆಗಳು.

❑

ಹಂಪಿಯ ಕನ್ನಡ ವಿಶ್ವವಿದ್ಯಾಲಯ ವಿದ್ಯೆಯನ್ನು ಕಲಿಯಲು ಅನುವು ಮಾಡಿಕೊಡುವ ಒಂದು ಸಂಸ್ಥೆಯೇ ಹೊರತು ಅದು ವಿದ್ಯೆಯನ್ನು ಕಲಿಸುವ ಸಂಸ್ಥೆಯಲ್ಲ. ನಮ್ಮ ನಾಡಿನಲ್ಲಿ ಹಳೆಯ ಕಾಲದ ತಿಳುವಳಿಕೆಯೊಂದಿದೆ. ಅಲ್ಲದೆ ಪಶ್ಚಿಮದಿಂದ ಹರಿದು ಬರುತ್ತಿರುವ ಜ್ಞಾನ ಪ್ರವಾಹವೂ ಇದೆ. ಈ ಎರಡೂ ತಿಳುವಳಿಕೆಗಳು ಒಂದಕ್ಕೊಂದು ಸಂಧಿಸಿ ಬೆಳಕನ್ನು ಉಂಟುಮಾಡಿವೆ. ಜೊತೆಗೆ ದಿಗ್ಭ್ರಮೆಯನ್ನೂ ತಂದಿವೆ. ಈ ತಿಳುವಳಿಕೆಗಳ ವಿವೇಕದ ವಿನಿಯೋಗ ಇಂದು ಅಗತ್ಯವಾಗಿದೆ. ಇಂಥ ವಿನಿಯೋಗಕ್ಕಾಗಿ ಹೊಸ ಬಗೆಯ ಶಾಸ್ತ್ರ ವಿಧಾನಗಳು ನಮಗಿಂದು ಬೇಕಾಗಿವೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಸಂಶೋಧನೆಯ ಗುರಿಯೆಂದರೆ ಈ ಶಾಸ್ತ್ರ ವಿಧಾನಗಳ ನಿರ್ಮಾಣ.

ನಾವು ನಮ್ಮ ನಮ್ಮಲ್ಲಿ ವಿಚಾರ ವಿನಿಮಯ ನಡೆಸಲು, ಒಬ್ಬರ ಅರಿವನ್ನು ಎಲ್ಲರೂ ಹಂಚಿಕೊಳ್ಳಲು ವಿಶ್ವವಿದ್ಯಾಲಯದಲ್ಲಿ ಪ್ರತಿವಾರ ಮಂಟಪ ಎಂಬ ಕಾರ್ಯಕ್ರಮ ನಡೆಸುತ್ತೇವೆ. ಅಲ್ಲಿ ಹೊಮ್ಮಿದ ವಿಚಾರಗಳು ನಮ್ಮ ಅರಿವನ್ನು ಹೆಚ್ಚಿಸಿದಂತೆ ನಿಮಗೂ ಲಾಭದಾಯಕವಾಗುವವೆಂಬ ನಂಬಿಕೆಯಿಂದ ಪುಸ್ತಿಕೆಗಳ ರೂಪದಲ್ಲಿ ಅವನ್ನು ಪ್ರಕಟಿಸಿ ನಿಮ್ಮ ಕೈಗಿಡುತ್ತಿದ್ದೇವೆ.

ಚಂದ್ರಶೇಖರ ಕಂಬಾರ
ಕುಲಪತಿಗಳು